ಕೊರವಂಜಿ

ಸಂಪುಟ ೧೧ | ಆಗಸ್ಟ್ ೧೯೫೨ | ಸಂಚಿಕೆ ೫

ಕುಹಕಿಡಿಗಳು

ಜನರಲ್ ನಗೀಬ್‌ರವರಿಗೆ ಡಾ|| ಮೊಸಾದಿಕ್ ಅಭಿನಂದನೆ ಕಳಿಸಿದ್ದಾರಂತೆ.

*　　　*　　　*

ದೊರೆ ಫರೂಕ್‌ರವರ ಅಮೇರಿಕಾದ ವಿಳಾಸವೇನು ಎಂದು ಪರ್ಷಿಯಾದ 'ಷಾ' ರವರು ಆಗಲೇ ವಿಚಾರಿಸುತ್ತಿದ್ದಾರಂತೆ.

—ಅಲ್ಲೂ ಹತ್ತಿರದಲ್ಲೇ ನೆಲೆಸಬೇಕೆಂಬ ಮುನ್ನಾಲೋಚನೆ ಇರಬಹುದು.

*　　　*　　　*

ಉತ್ತರ ಭಾರತದ ಪ್ರಜಾಸಭೆಯಲ್ಲಿ ಒಬ್ಬರಂದರಂತೆ—ಕ್ರಿಕೆಟ್—ಮತ್ತು ಹಾಕಿ ಫಲಿತಾಂಶಗಳನ್ನು ನೋಡಿದಮೇಲೆ, "ಇನ್ನು ಮುಂದೆ ಶ್ರೀ ಬಾಬು ಅವರನ್ನೇ ಕ್ರಿಕೆಟ್ ಕ್ಯಾಪ್ಟನ್ನರಾಗಿ ಸರಕಾರ ನಿಯಮಿಸಬೇಕು" ಎಂದು.

*　　　*　　　*

ಜನಾಬ್ ಜಫುರುಲ್ಲಾಖಾನರು ಕರಾಚಿಯಲ್ಲಿ ನಡೆದ ವಿದ್ಯಮಾನಗಳನ್ನೂ ನೋಡಿನದಂತರ, ಹೇಳಿದರಂತೆ "ಪಾಕಿಸ್ಥಾನ ಹಿಂದೂಸ್ಥಾನ ಅಂತ ಬೇರ್ಪಡಿಸಿದ್ದೇ ತಪ್ಪು. ಎಲ್ಲವೂ ಅಖಂಡ ಭಾರತ ಅಂತ ಇರಬೇಕಾಗಿತ್ತು.

—ಹೀಗೆ ಅಂತ ಹಿಂದೂಜನ ಸಭೆಯ ಹೇಳಿಕೆ ಇನ್ನೂ ಹೊರಬಿದ್ದಿಲ್ಲವಂತೆ.

ವೃತ್ತಿಶಿಕ್ಷಣ ಶಾಲೆಗೆ ಆಯ್ಕೆಮಾಡುವಾಗ, ಹುಡುಗರಿಗೆ ವೃತ್ತಿಯಲ್ಲಿ ಅಭಿರುಚಿ ಇದೆಯೇ ಎಂದು ತಿಳಿಯಲು ಒಂದು ಸಮಿತಿ ಏರ್ಪಡಿಸಿತ್ತಂತೆ

—ಕೇಳಿದ ಪ್ರಶ್ನೆಗಳು.—ಆ ಅಂಗಿ ನಿನ್ನದೇ?—ವರ್ಗೀಸ್ ನಿನಗೆ ಪರಿಚಯ ಉಂಟೆ—ಏರೋಪ್ಲೇನ್ ಬಿಡಲು ಬರುತ್ತದೆಯೆ—ಅಮೆರಿಕಾ ನೋಡಿದ್ದೀಯಾ—

—ಆಯ್ಕೆಯಾರಿಗೆ ಅಥವಾ ಯಾತಕ್ಕೆ? ಅಂತ ಅನುಮಾನ ಬರುತ್ತಲ್ಲವೇ?

* * *

ಇನ್ನು ಮೇಲೆ ರೂಪಾಯಿಗಳನ್ನು ಕಬ್ಬಿಣದಲ್ಲಿ ಮಾಡುತ್ತಾರಂತೆ-(ಗಾಳಿಸುದ್ದಿ)

—ಇದ್ದವರ ಕೈನಲ್ಲಿ ಹೆಚ್ಚುಕಾಲ ಬಾಳಲಿ ಅಂತಲೇ?

* * *

ಕೆಟ್ಟ ಕೆಟ್ಟ ಕನಸು ಬೀಳುತ್ತೆ, ಸರಿಯಾಗಿ ನಿದ್ರೆ ಬರುಲ್ಲ ಅಂದ ರಾಜಕಾರಣಿಗೆ ಶಾಸ್ತ್ರಿಗಳು ರಕ್ಷಾಗೀತ ಹೇಳಿಕೊಟ್ಟರಂತೆ—

—"ರಾಮು ಚೆನ್ನಂ, ಹನೂಮಂತಂ, ಮಂಜಸಿದ್ಧಂ ತೃಣೋದರಂ;
ಶಯನೇಯ ಸ್ಮರೇನ್ನಿತ್ಯಂ ದುಸ್ಸ್ವಪ್ನಂ ತಸ್ಯನಶ್ಯತಿ"

* * *

ಕೋಗಿಲೆಯ ಕುಹೂ ಮಿಕ್ಕಿತರ ಪಕ್ಷಿಗಳ ಇಂಚರಕ್ಕಿಂತ ಮೊದಲೇ ಕೇಳಿ ಬರುತ್ತದೆ. (ಹೇಳಿಕೆ)

ಮನೆಗೆಲಸ ಇದೆಯೇ ಅದಕ್ಕೆ ಮಾಡುಕ್ಕೆ?

* * *

ಶ್ರಾವಣ ಶನಿವಾರ ಅಂತ ನಮ್ಮ ಚಿರಂಜೀವಿಗೆ ನಾಮಹಚ್ಚಿ ನಾಲ್ಕು ಮನೆ ಬಾಗಿಲಿಗೆ ಕಳಿಸಿವರೆ, ಭಿಕ್ಷಾಪಾತ್ರೆಯಲ್ಲಿ ನಾಲ್ಕು ಆಣೆ ತೆಗೆದುಕೊಂಡು ಬಂದ, ಒಂದು ಹಿಡಿ ಅಕ್ಕಿಯೂ ಇರಲಿಲ್ಲ ಎಂದೊಬ್ಬರು ಓದುಗರು ಬರೆದಿದ್ದಾರೆ.

* * *

೧೨೬ ವಯಸ್ಸಾದವರೊಬ್ಬರು ನಿಧನರಾದರಂತೆ ಕೊಚ್ಚಿನ್ನಿನಲ್ಲಿ.

—ರಾಜಕೀಯಕ್ಕೆ ಕೈಹಾಕದೇ ಇದ್ದುದರಿಂದ ಇಷ್ಟುಕಾಲ ಬದುಕಲಾಗಿತ್ತು ಎಂದು ಅವರ ಮನೆಯವರು ಹೇಳುತ್ತಿದ್ದಾರಂತೆ.

—o—

ಉಂಗಾಳಿ

ನಾವು ವಾಸಿಸುವ ಈ ಭೂಗೋಳಕ್ಕೆ ಆಗಲೇ ೨೦೦ ಕೋಟಿ ಸಂವತ್ಸರಗಳು ಆಯುಸ್ಸಾಗಿದೆ, ಎಂದು ಒಬ್ಬರು ಲೆಕ್ಕಹಾಕಿ ತೋರಿಸಿದಾರೆ....ಪ್ರಗತಿ ಶೀಲ ಸಾಹಿತಿಗಳಿಗೆ ಇದು ತೀರ ಅಸಹ್ಯವಾಗಿ ಕಾಣುವುದು ಸಹಜ.

* * *

ಅಲ್ಪಸ್ವಲ್ಪ ನರೆತ ಕೂದಲಿನವರ ಉಪಯೋಗಕ್ಕಾಗಿ ತೈಲ, ಬಾಟ್ಲಿ ೧ ರೂ! ಪೂರ್ತನರೆತ ಕೂದಲಿನವರಿಗೆ ಸ್ಪೆಷಲ್ ಬಾಟ್ಲಿ ೧೦ ರೂ. (ಜಾಹಿರಾತು) ಹೌದು; ಪೂರ್ತನರೆತವರನ್ನು ಹೀಗೆ ಬೋಳಿಸಲೇ ಬೇಕು.

* * *

ಹಿಂದಿ ಪ್ರಚಾರದಿಂದ ತಮಿಳು ಚಲನ ಚಿತ್ರ ಕೈಗಾರಿಕೆಗೆ ದೊಡ್ಡ ಧಕ್ಕೆ ತಗಲಿದೆ (ಪತ್ರಿಕೆ) ಹಾಗಾದರೆ, ಹಿಂದಿ ಪ್ರಚಾರದಿಂದ ಹಲವು ಅನುಕೂಲಗಳೂ ಉಂಟು ಎಂದ ಹಾಗಾಯಿತು.

* * *

ಸರ್ಕಾರಿ ಕೈಗಾರಿಕಾ ಕೇಂದ್ರಗಳಲ್ಲಿ ತಯಾರಾಗುವ ವಸ್ತುಗಳನ್ನು ಖಾಸಗಿ ಕೈಗಾರಿಕಾ ಸಂಸ್ಥೆಗಳವರೂ ತಯಾರಿಸುವುದಕ್ಕೆ ಉತ್ತೇಜನ ಕೊಡಬೇಡಿ (ಭಾಷಣ) ಖಾಸಗಿ ಸಂಸ್ಥೆಗಳಲ್ಲಿ ಸೋಮಾರಿತನ ತಯಾರಿಸುತ್ತಿಲ್ಲವಲ್ಲಾ.

* * *

ಅಮರಕೋಶವನ್ನು ಪ್ರಾಥಮಿಕ ವಿದ್ಯಾರ್ಥಿಗಳು ಓದುವಂತೆ ಮಾಡಿ (ಶ್ರೀ ಗುಬ್ಬಿ ವೀರಣ್ಣ) ಹಾಗೆ ಮಾಡಿದರೆ, ಪ್ರಾಥಮಿಕ, ವಿದ್ಯಾರ್ಥಿ ಎಂಬ ಮಾತುಗಳನ್ನು ಓದುವ ಸಾಮರ್ಥ್ಯ ಬರುತ್ತದೆ.

* * *

ಈಗಿನ ಕಾಲದಲ್ಲಿ ಹುಡುಗರು ಅಶ್ವಿನಿ ಭರಣಿ ಅನ್ನುತ್ತಾರೆ; ಅದರ ಮೇಲೇ ನಪ್ಪ, ಅಂದರೆ, "ಕುಂಕುಮದ ಭರಣಿ" ಅನ್ನುತ್ತಾರೆ (ಭಾಷಣ) ಅಷ್ಟರೊಳಗೆ ಅಷ್ಟು ವಯಸ್ಸು ಬಂದಿರುತ್ತದೆ, ಎಂದು ತೋರುತ್ತದೆ.

* * *

ಉದ್ಯಾನಗಳ ಮತ್ತು ತರಕಾರಿ ತೋಟಗಳ ಸ್ಪರ್ಧೆ ಇದೇ ತಿಂಗಳು ನಡೆಯುತ್ತದೆ....ಅವಕ್ಕೂ, ಪೋಲಿದನಗಳಿಗೂ ಇರಬಹುದು.

* * *

ಫವಾಂ ಸುಲ್ತಾನೆಯವರ ರಾಜಿನಾಮೆಯನ್ನೂ ಡಾ|| ಮೊಸಾದಿಕ್‌ರ ಮುಖ್ಯ ಮಂತ್ರಿತ್ವವನ್ನೂ ಸಾರುವ ಹೊತ್ತಿಗೆ ೨೦ ಮಂದಿ ಇರಾಸಿಯವರು ಪ್ರಾಣಸೀಗಿದ್ದರು (ಸುದ್ಧಿ) ಅಷ್ಟು ಜನಕ್ಕೆ ಸುಲ್ತಾನೆಯವರು ಮಂತ್ರಿ ಪದವಿಕೊಡುತ್ತೇನೆಂದು ವಾಗ್ದಾನ ಮಾಡಿದ್ದರೇನು?

* * *

೧೫೦೦೦ ಅಡಿಗಳಷ್ಟು ಎತ್ತರದ ಹಿಮಾಲಯಾ ಶಿಖರದಿಂದ ನೋಡಿದಾಗ, ಭಾರಿಪ್ರಮಾಣದ ರಣಹದ್ದುಗಳನ್ನು ನಾವು ಕಂಡೆವು, ಎಂದು ಸ್ವಿಸ್ ಪರ್ವತಾರೋಹಿಗಳು ಹೇಳಿಕೆ ಇತ್ತಿದಾರೆ...ಅಷ್ಟು ಎತ್ತರದಿಂದ ಅಷ್ಟು ಭಾರಿಯಾಗಿ ಕಂಡ ನಮ್ಮ ಕರೀಪೇಟೆ ಪ್ರಮುಖರು ನಿಜಕ್ಕೂ ಎಷ್ಟು ಭಯಂಕರ ವ್ಯಕ್ತಿಗಳು ಎಂದು ಈಗಲಾದರೂ ಸರ್ಕಾರಕ್ಕೆ ತಿಳಿಯಿತೆ?

* * *

"ನಾನ್ಯಾರು ಗೊತ್ತೆ?" ಎಂದು ಮುಖ್ಯಮಂತ್ರಿಗಳು ಶಾಲಾ ಬಾಲಕರನ್ನು ಕೇಳಿದಾಗ, "ನೀವು ಇನ್‌ಸ್ಪೆಕ್‌ಟ್ರು! ಮೇಷ್ಟರು ಹಾಗೆಯೇ ಹೇಳಿಕೊಟ್ಟಿರೋದು" ಎಂದರಂತೆ. ಅವರಿಂದ ಇನ್‌ಸ್ಪೆಕ್‌ಟ್ರು ಬಂದು ಹೋದಾಗಿನ ಫಲವನ್ನೇ ಉಪಾಧ್ಯಾಯರು ನಿರೀಕ್ಷಿಸಿರಬೇಕು, ಎಂದು ತೋರುತ್ತೆ.

* * *

ಅತ್ಯಂತ ಪುರಾಣಕಾಲದ ಕಮಲವೊಂದು ಈಗ ಅಮೇರಿಕಾದಲ್ಲಿ ಅರಳಿದೆ (ಸುದ್ಧಿ) ಒಳ್ಳೇ ಮಾತಾಡಿದರೆ, ನಮ್ಮಮನೆ ಕಮಲ ಅರಳುವುದುಂಟು.

* * *

ದಾಗಪ್ರವೇಶ ಚಂದ್ರ ಎಂ. ಪಿ. ಅವರು ಸಭಾಧ್ಯಕ್ಷರನ್ನು ಸಂಬೋಧಿಸಿ, ವಿವಾಹವಾಗದ ಮೆಂಬರುಗಳಿಗೆ ವಾಸದ ಮನೆಗಳು ದೊರೆಯುವುದೇ ಕಷ್ಟವಾಗಿದೆ: ನಮಗೆ ಒಂದು ಪ್ರತ್ಯೇಕ ಕಟ್ಟಡಬೇಕು ಎಂದರು (ಸುದ್ದಿ)....ವಾಸದ ಮನೆಗಳು ದೊರೆಯದಿರುವುದು ವಿವಾಹವಾಗಿಲ್ಲ ಎಂಬ ಕಾರಣದಿಂದ ಇರಲಾರದು.

* * *

'ರಂಜನಾ' ಎಂಬ ಹೆಸರಿನ ವಾಕ್ಚಿತ್ರಕ್ಕೆ, ಅದು ಅರ್ಧ ತಯಾರಾಗುತ್ತಿದ್ದಾಗಲೇ "ಪೈಸೆ ನೈ" ಎಂದು ಹೊಸಹೆಸರನ್ನಿಡಲಾಗಿದೆ....ನಿಜಾಂಶವನ್ನು ಹೀಗೆ ಹೊರಗೆಡಹುವುದೇ ಬುದ್ಧಿವಂತರ ಲಕ್ಷಣ.

* * *

ಸರ್ಕಾರದವರು ನಾನಾ ರೀತಿಯ ಮಾರ್ಗಗಳನ್ನು ಕಂಡು ಹಿಡಿದು ಎನ್.ಜಿ.ಓ.ಗಳಿಗೆ ಸಹಾಯ ಮಾಡಬೇಕು (ಭಾಷಣ) ಅಥವಾ, ಕಂಡು ಹಿಡಿಯದೆ ಇದ್ದರೂ ಸಾಕು.

ಒಂದು ಬಹಿರಂಗ ಪತ್ರ

—

ಕೊರವಂಜಿ ಸಂಪಾದಕರ ಸಮುಕ್ಷಮುಕ್ಕೆ

ಈ ಸಾರಿ ಇಂಟರ್ ಪರೀಕ್ಷೆಯಲ್ಲಿ ಮೊದಲ ತರಗತಿಯಲ್ಲಿ ಮೊದಲ ಸಲ ಪ್ಯಾಸುಮಾಡಿದ ಬಾಲು ಮಾಡುವ ನಮಸ್ಕಾರಗಳು. ನನ್ನ ಜತೆಯಲ್ಲಿ ಪ್ಯಾಸು ಮಾಡಿದವರು ಮೆಡಿಕಲ್ ಇಂಜನಿಯರಿಂಗ್ ಈ ರೀತಿ ಮುಂದೆ ಓದು ಸಾಗಿಸಲು ಪಡುತ್ತಿರುವ ಕಷ್ಟಗಳನ್ನು ವಿಶದೀಕರಿಸಿ ಪರಿತಾಪ ಸೂಚಿಸಿ ಸಾಕಷ್ಟು ಲೇಖನಗಳು ದಿನ ಪತ್ರಿಕೆಗಳಲ್ಲಿ ಬಂದಿವೆ. ಆದರೆ ಒಂದು ಲೇಖನವಾದರೂ, ಒಂದು ಹೇಳಿಕೆಯಾದರೂ ಒಂದು ನರಪಿಳ್ಳೆಯಾದರೂ—ಈ ತರಹ ಹುಡುಗನು ಈಗಿನಿಂದಲೇ ಪರದಾಡ ಹತ್ತಿದರೆ ಮುಂದಕ್ಕೆ ಉಪಯೋಗ. ಅನ್ನುವ ಸತ್ಯವಾದ ವಿಷಯವನ್ನು ಹೊರಗೆಡಹಿಲ್ಲ. ನೀವಾದರೂ ದಯಮಾಡಿ ಈ ಪತ್ರವನ್ನು ಬಹಿರಂಗ ಪಡಿಸಿ ನನ್ನ ಸಹ ವಿದ್ಯಾಬಾಂಧವರಿಗೆ ತಿಳಿಬೆಳಕು ತೋರುವಂತೆ ಸಹಾಯ ಮಾಡಬೇಕೆಂದು ವಿನಂತಿ.

ನಾನು ಈ ಸಾರಿ ಇಂಟರ್ ಮೊದಲ ತರಗತಿಯಲ್ಲಿ ಪ್ಯಾಸಾದಾಗ ನಮ್ಮ ಅಜ್ಜಿ ಸತ್ಯನಾರಾಯಣ ಪೂಜೆ ಮಾಡಿಸಿ ವರ ಕೇಳಿದಳು ದೇವರು ಬಲಗಡೆಯಿಂದ ಹೂವನ್ನು ಕೆಳಕ್ಕೆಸೆದ. ಆಗಲೇ ಅಜ್ಜಿ ಅಂದಳು ಈ ವರ್ಷ ನಿನಗೆ ಖಂಡಿತ ಶ್ರೇಯಸ್ಸು ಅಂತ. ಅದಾದ ಮೇಲೆ ದಿನಾಗಲೂ ಇಂಜನಿಯರಿಂಗ್ ಸರ್ಕಾರಿ ಕಾಲೇಜಿನ ಸದಸ್ಯರುಗಳು, ಖಾಸಗಿ ಇಂಜಿನಿಯರಿಂಗ್ ಕಾಲೇಜಿನ ಸದಸ್ಯರು ಇವರುಗಳ ಮನೆ ಪತ್ತೆಹಚ್ಚಿ ಹದಿನೈದುದಿನ ಓಡಾಡಿದೆ. ನಂತರ ಕಾಲೇಜಿನಲ್ಲಿ ಭೇಟಿಮಾಡಿ ಹುಡುಗರನ್ನು ಆಯ್ಕೆ ಮಾಡುತ್ತೇವೆ ಎಂದರು. ತಿರುಗಿ ತಿರುಗಿ ಇಂಟರ್ ವ್ಯೂ ಎಂದರು. ಎಲ್ಲಾ ಸುಸೂತ್ರವಾಗಿ ನಡೆದು ಮಾಡಿದೆ.

ದಿನಾಗಲೂ ಸುಮಾರು ಮೂವತ್ತು ಮೈಲಿ ನಡೆಯುತ್ತಿದ್ದೆ. ಹೀಗೆ ಸುಮಾರು ಮೂವತ್ತು ದಿನ ಆಗಿದ್ದಿರಬಹುದು. ಕಾಲು ತೋಳನ ಕಾಲಿನಹಾಗೆ ಬಲಿಷ್ಟವಾಗಿತ್ತು. ಎಣ್ಣೆ ನೀರು ಹಾಕುತ್ತಿದ್ದಾಗ ಅಜ್ಜಿ ಅಂದಳು. ನಿನ್ನ ಕಾಲು ಏನೋ ಇಷ್ಟು ಗಟ್ಟಿಯಾಗಿದೆ. ಕಾಲಿದ್ದವರನ್ನೇ ಅಂಚೆ ಜವಾನನ್ನಾಗಿ ಮಾಡಿದರೆ ದೇಶಕ್ಕೂ ಒಳ್ಳೆಯದು ಅಲ್ಲವೇ ಅಂದರು.

ಅಭ್ಯಂಗನ ಆಗಿ ಊಟ ಆಗಿ ಕುರ್ಚಿಮೇಲೆ ವಿಶ್ರಮಿಸುಕೊಳ್ಳುತ್ತಿದ್ದಾಗ. ಅನ್ನಿಸಿತು ನನಗೆ "ದಿಟವಾಗಲೂ ಅಲ್ಲಿ ಇಲ್ಲಿ ಇಂಜನಿಯರಿಂಗ್ ಮೆಡಿಕಲ್ ಅಂತ. ಹೆಗಲಮೇಲೆ ಅಳಿಲಿನ ಹಾಗೆ ಪಟ್ಟೆಹೊತ್ತು ಸುತ್ತಿ ಸುತ್ತಿ, ಓದಿ ಓದಿ ಕಡೆಗಾದರೂ ಆಗುವುದೇನು? ಅಜ್ಜಿ ಹೇಳಿದಹಾಗೆ ಅಂಚೆ ಜವಾನನಾದರೆ ನನ್ನ ತಾಪತ್ರಯವೂ ಕಡಿಮೆ ಆಗಬಹುದು. ಇಷ್ಟುದಿನ ನಡೆದದ್ದಕ್ಕೂ ಸಾರ್ಥಕ, ದೇಶಸೇವೇನೂ ಆದ ಹಾಗೆ ಆಯಿತು." ಎಂದು.

ಮಾರನೆದಿನ ಕಾರ್ಡೊಂದು ಕೊಳ್ಳಲು ದೊಡ್ಡ ಅಂಚೆ ಕಛೇರಿಗೆ ಹೋದೆ. ಕಾರ್ಡು ಕೊಡಿ ಎಂದೆ. ತಕ್ಷಣ ನಗುನಗುತ್ತಾ ಕಿಟಕಿಹಿಂದಿನ ನೌಕರ ಕಾರ್ಡು ಕೂಡಲೇಕೊಟ್ಟ. ಸಾಮಾನ್ಯವಾಗಿ ಅವ ನನ್ನನ್ನು ನೋಡದವನ ಹಾಗೆ ಆ ಕೆಲಸ ಈ ಕೆಲಸ ಮಾಡಿ ನೆಶ್ಯ ಏರಿಸಿ ಅದನ್ನೂ ಸಾವಧಾನವಾಗಿ ಕೊಡವಿಕೊಂಡು ನಂತರ ನನ್ನ ಕಾರ್ಡನ್ನು ಕೊಡುವವ. ಇವತ್ತೇನು ಬಂತು ಇಷ್ಟು ತರಾತುರಿ ಸೌಜನ್ಯ ಇವನಿಗೆ ಎಂದು ಅವನನ್ನು ಕೇಳಿಯೇ ಬಿಟ್ಟೆ. ಮದ್ರಾಸಿನಿಂದ ದೊಡ್ಡ ಅಧಿಕಾರಿ ಪಿ. ಎಂ. ಜಿ. ಬಂದಿದ್ದಾರೆ. ಒಳಗಿದ್ದಾರೆ ಅಂದ.

ತಕ್ಷಣ ಅಜ್ಜೀ ಹೇಳಿದ್ದು ಜ್ಞಾಪಕ ಬಂತು. ಆ ಕಾರ್ಡಿನ ಅರ್ಧದಲ್ಲಿ ನನ್ನ ಹೆಸರು ಬರೆದು, ಪಿ. ಎಂ. ಜಿ. ಯವರ ಭೇಟಿಯನ್ನು ಕೇಳಿಕೊಂಡೆ. ಅಂತಹಾ ದೊಡ್ಡವರು. ಆದರೂ ಕೂಡಲೇ ಭೇಟಿಕೊಟ್ಟರು. ಅಂಚೆ ಇಲಾಖೇಲಿ ಇಂಟರ್‌ವ್ಯೂ ಕೇಳುವವರು ಪೋಸ್ಟ್ ಕಾರ್ಡನ್ನೇ ವಿಸಿಟಿಂಗ್ ಕಾರ್ಡ್ ಮಾಡಿದ್ದನ್ನು ನೋಡಿ ಮೆಚ್ಚಿದರು. ನನಗೊಂದು ಕೆಲಸ ಬೇಕು. ಇಂತಿಂತಹ ಪ್ಯಾಸು ಮಾಡಿದ್ದೇನೆ. ಅದಕ್ಕೂ ಮುಖ್ಯ ನಡೆದೂ ನಡೆದೂ ಕಾಲು ಜೋರಾಗಿ ಬೆಳೆಸಿದ್ದೇನೆ. ಅಂಚೆ ಜವಾನನ ಕೆಲಸ ಕೊಡಿ. ನನ್ನ ಮೀನ ಖಂಡ ನೋಡಿ ಅಂತ ಪೈಜಾಮಾ ಮೇಲೆ ಮಾಡಿ ಮೀನ ಖಂಡ ತೋರಿಸಿದೆ. ಅವರು ಮುಟ್ಟಿ ನೋಡಿದರು. ಭೇಷ್ ಅಂದರು. ತಕ್ಷಣ ಕೆಲಸ ಕೊಟ್ಟರು. ಇನ್ನು ಮೇಲೆ ಓದಿದವರು ಅಂಚೆ ಜವಾನ ರಾಗಿ ಸೇರಿದರೆ ಮುಂದಕ್ಕೆ ಅವರನ್ನು ಪೋಸ್ಟ್ ಮಾಸ್ತರು, ಇನ್‌ಸ್ಪೆಕ್ಟರು, ಕಡೆಗೆ ನನ್ನ ಹುದ್ದೆ ತನಕ ಬರಲು ಅವಕಾಶ ಮಾಡಿಕೊಡುತ್ತೇನೆ ಎಂದು ಭರವಸೆ ಇತ್ತರು.

ಅವರ ವಯಸ್ಸು ಆಗಲೇ ೫೫ ಇದ್ದಿರಬಹುದು. ಇಲಾಖೆಯಲ್ಲಿನ ವಯಸ್ಸು ೫೦ ಆದರೂ ಆಗಿದ್ದಿರಬಹುದು. ಐದು ವರ್ಷದಲ್ಲಿ ಇಷ್ಟೆಲ್ಲಾ ಪ್ರಗತಿ ಸಾಧಿಸುತ್ತಾರೆಯೇ ಇವರು ಎಂಬ ಅನುಮಾನ ಬಂದರೂ ಸಿಕ್ಕಿದ್ದೇ ಲಾಭ. ಮುಂದಕ್ಕೆ ಇವ ರ್‍ಯಾಕೆ ಬೇಕು ಸುತ್ತಿಗೆ ಕುಡುಗೋಲೇ ಬರಬಹುದು. ನೋಡಿಕೊಳ್ಳೋಣ ಅಂತ ಕೆಲಸಕ್ಕೆ ಸೇರಿದೆ. ಸಂಬಳ ೩೦—ಪ್ರೀತಿ ಭತ್ಯ—ಅರವತ್ತು—ಊರಿನವರಿಗೆ ಯಾರಿಗೆ

ಎಲ್ಲಿಂದ ಮನಿಆರ್ಡರ್ ಬಂದರೂ ನನಗೆ ಎರಡಾಣೆ ಹೀಗಾಗಿ ಜೀವನ ಸದ್ಯಕ್ಕೆ ಸುಗಮವಾಗಿದೆ.

ನನ್ನ ಓದುಗ ಬಾಂಧವರಲ್ಲಿ ನನ್ನ ವಿನಂತಿ ಇದೇ—ಅಲ್ಲಿ ಇಲ್ಲಿ ಅವರಿವರನ್ನು ಸೀಟಿಗಾಗಿ ಬೇಟಿ ಮಾಡಲು ನಡೆದೂ ನಡೆದೂ ಸುಸ್ತಾಯಿತು ಎನ್ನಬೇಡಿ. ದೇವರು ಅಂತ್ಯದಲ್ಲಿ ಏನನ್ನೋ ನಮಗೆಲ್ಲಾ ಮಡಿಗಿದ್ದಾನೆ. ಅದಕ್ಕೇ ಈ ಕಷ್ಟ ಈಗ. ಈ ಕಷ್ಟದಿಂದಲೇ ಮುಂದಕ್ಕೆ ನಮಗೆ ಸದ್ಗತಿ. ನನ್ನ ಅದೃಷ್ಟ ನೋಡಿ ನೀವೂ ಧೈರ್ಯ ತಂದುಕೊಳ್ಳಿ.

ಅಂದಹಾಗೆ ಇನ್ನೂ ನಾಲ್ಕು ಅಂಚೆ ಜವಾನರ ಕೆಲಸ ಖಾಲಿ ಇದೆ ಅಂತ ನಮ್ಮ ಆಫೀಸಿನಲ್ಲಿ ಸುದ್ದಿ. ಬಂದವರಿಗೆ ಬಾಯಿ ತುಂಬ ಸಹಾಯ ಮಾಡುತ್ತೇನೆ.

ಇತಿ ನಿಮ್ಮವನೇ,

ಅಂಚೆ ಜವಾನ ಮಲ್ಲಣ್ಣ.

ಆಗ—ಈಗ

ಮದುವೆಯಾಗುವ ಮುನ್ನ ಆರು ತಿಂಗಳಹಿಂದೆ,
ಅವನು ನುಡಿವನು, ಇವಳು ಆಲಿಸುವಳು.
ನನ್ನ ರತಿ, ಮೋಹಿನಿಯೆ, ನನ್ನ ಬಾಳಿನಬೆಳಕೆ
ಎಂದು ಕರೆಯುವನವಳ ಹಗಲು ಇರುಳು!

ಮದುವೆಯಾದಾಮೇಲೆ ಆರು ತಿಂಗಳ ಈಚೆ
ಅವಳು ನುಡಿವಳು, ಇವನು ಆಲಿಸುವನು!
ನನ್ನ ನಲ್ಲೆಯಮಾತು ವೀಣೆಯಿಂಚರದಂತೆ
ಮರಿದುಂಬಿರವದಂತೆ ಎಂದು ನಲಿಯುವನು!

ಆರು ವರುಷದ ಮೇಲೆ ಇಬ್ಬರೂ ನುಡಿಯುವರು
ಆಚೀಚೆ ಮನೆಯವರು ಆಲಿಸುವರು!
ಮೂರು ಮಕ್ಕಳ ರಾಗವಿದರೊಡನೆ ಬೆರೆತಿರಲು
ನಿದ್ರೆಯಿಲ್ಲಾರಿಗೂ ಹಗಲು ಇರುಳು!

—ದಿಬ್ಬಯ್ಯ

ಹೋಟ್ಲು ಮಾಣಿಗೆ

ಏನು ಬೇಕು, ಎಂದು ನೀನು, ಬಳಿಗೆ ಬಂದು, ಕೇಳಿದೆ;
"ದೋಸೆ!" "ದೋಸೆ!"—ಎನುತ ನಾನು ಬಯಕೆಯನ್ನು ಚೀರಿದೆ;
ಮಂದಹಾಸ ಬೀರಿ ನೀನು ವಿನಯದಿಂದ ಬಾಗಿದೆ;
"ಒಂದು ದೋಸೆ" ಎಂದು ಕೂಗಿ, ಎಲ್ಲೊ ಬೇಗ ಓಡಿದೆ.

ಕಾದು ಕುಳಿತೆ; ನಿನ್ನ ಸುಳಿವ ಕಾಣಲಿಲ್ಲ, ಇನ್ನುವೆ!
ಬಾಯ ನೀರು ನುಂಗಿ ನನಗೆ ವದನ ಬತ್ತಿಹೋಗಿದೆ;
ಅವರು, ಇವರು, ನನ್ನ ಸುತ್ತ ತಿಂದು ತೇಗುತಿರುವರು;
ಕಪ್ಪು ಬಸಿಯು, ಪ್ಲೇಟು, ಚಮಚ,—ಅಲ್ಲು ಇಲ್ಲು, ಎಲ್ಲಿಯು.

ಎದುರು ಬದುರು, ಹಿಂದೆ ಮುಂದೆ, ಗರಂ ಗರಂ, ಗಡಿಬಿಡಿ;
ಬೆಣ್ಣೆ! ಚಟ್ನಿ! ನೀರು! ಸರಬರಾಯಿ ನಡೆಯುತಿರುವುದು;
ನೀನು ಹೋದ ದಾರಿಯನ್ನೆ ಕಾವೆ, ಕಣ್ಣ ಮಂಜಲಿ;
ಏನು ಬಂತೊ, ಕೇಡು ನಿನಗೆ? ಜ್ವರವೆ? ಮೂರ್ಛೆ ತಗುಲಿತೆ?

ಎಷ್ಟು ಯುಗದ ತಪವು ಇನ್ನೂ ದೋಸೆವರವ ಪಡೆಯಲು?
ಹಸಿದು ಕುಸಿದ ವ್ಯಾಘ್ರನಾನು! ಈಗ ನಿನ್ನ ಕಂಡರೆ,....
ಸುತ್ತ ನೂರು ಜನರು ಇರಲಿ, ಈಗ ನೀನು ತಂದರೆ,....
ಕತ್ತು ಹಿಸುಕಿ....ಇಲ್ಲ, ಇಲ್ಲ, **ಒಂದು** ಸಾಲದೆನುವೆನು!

—ನಾ. ಕ.

—O—

ಪಾಪಿ! ತಾನೂ ರೇಡಿಯೋನ ಪೂರ್ತಿ ಕೇಳುಲ್ಲ
—ಇತರರನ್ನೂ ಕೇಳಿಸ ಗೊಡ.

(ಸುಬ್ಬಲಕ್ಷ್ಮಿ)

* * *

ಮನೇಲಿ ರೇಡಿಯೋ ಇಟ್ಕೊಂಡು
ನೆರೆಯವರನ್ನೆ ಸುದ್ದಿ ಏನು ಎಂದರಂತೆ.

(ಸುಬ್ಬಲಕ್ಷ್ಮಿ)

ಏಕಾನಾ

"ಚಂದ್ರಹಾಸ" ಸಿನಿಮ ಥಿಯೇಟರಿನವರು ಹೋದ ತಿಂಗಳು ತಮ್ಮ ನಾಲ್ಕಾಣೆ, ಆರಾಣೆ, ಒಂಬತ್ತಾಣೆ, ಹದಿಮೂರಾಣೆ, ಹದಿನೆಂಟಾಣೆ ಸೀಟುಗಳಿಗೆಲ್ಲ ತಲಾ (ಅಥವಾ ಆಸನಾ) ಒಂದಾಣೆ ರೇಟು ಹೆಚ್ಚಿಸಿದ್ದರಲ್ಲಾ....ಅದರ ವಿಷಯ ಗೊತ್ತೆ ನಿಮಗೆ?

ಹೇಳುತ್ತೇನೆ, ಕೇಳಿ. ಥಿಯೇಟರ ಮುಂದೆ ಹೊಸರೇಟಿನ ಬೋರ್ಡು ಇಟ್ಟರು; ಅಚ್ಚುಹಾಕಿಸಿ, ಚೀಟಿ ಹಂಚಿದರು; ಸ್ಲೈಡುಗಳಲ್ಲೂ ಪ್ರಕಟಿಸಿದರು, ಮೂರುದಿನ.

ನಮ್ಮ ಬಸವರಾಜುವಿಗೆ ಇದು ಸರಿ ಬೀಳಲಿಲ್ಲ. ಅನ್ಯಾಯ, ಅಕ್ಷಯ, ದರೋಡೆ, ಎಂದೆಲ್ಲ ಕೂಗಾಡಿದ, ಬೀದಿಯಲ್ಲಿ. ಮನೆಗೆ ಬಂದು ಊಟಮಾಡಿದ ಮೇಲೂ ಅವನ ಕೋಪ ಇಳಿಯಲಿಲ್ಲ. 'ಇವನು ತರಿಸೋದು ತೂತುಬಿದ್ದ ದರಿದ್ರ ಚಿತ್ರ; ಅಮೆರಿಕನ್ ಇಮಿಟೇಷನ್ ಕಥೆ, ಹಿಂದಿ ಇಮಿಟೇಷನ್ ಹಾಡು; ಇವನು ಕೊಡೋದು ತಗಣೆ ಬೆಂಚು, ನಾವು ಕೂಡೋದು ಕತ್ತಲೆ ಕೋಣೆ; ಈ ಭಾಗ್ಯಕ್ಕೆ ಹನ್ನೆರಡುಕಾಸು ಹೆಚ್ಚು ಏಕೆ ತೆರಬೇಕು, ನಾವು? "ಎಂದು ಭಾಷಣಮಾಡಿದ, ಮಧ್ಯಾಹ್ನ.

ಸಂಜೆ ಹೊತ್ತಿಗೆ, ಮುಷ್ಕರದಮಾತು ಎತ್ತಿದ. "ನಿನ್ನ ಮಾತು ಯಾರು ಕೇಳುತ್ತಾರೊ? ಸ್ಕೂಲಿಗೆ ಹೋಗಬೇಡಿರೊ, ಮುಷ್ಕರ ಹೂಡಿರೋ ಅಂದರೆ, ಮೂರು ವರ್ಷವಾದರೂ ಹುಡುಗರು ಬೀದಿಯಲ್ಲೇ ಓಡಾಡುತ್ತಿರುತ್ತಾರೆ....ಸಿನಿಮಾಗೆ ಹೋಗ ಬೇಡಿರೋ ಅಂದರೆ, ನಿನ್ನನ್ನೇ ಹುಚ್ಚ ಅಂತಾರೆ, ಅಷ್ಟೆ" ಎಂದೆವು, ನಾವು.

ಆಗ, ಬಸವರಾಜ, "ಊಹೂಂ! ಅದಲ್ಲ ನನ್ನ ಮುಷ್ಕರದನೀತಿ! ಈ ಮಾಲೀಕನಿಗೆ ಒಳ್ಳೆ ಪಾಠ ಕಲಿಸಬೇಕು. ಈ ಊರಿನ ಅಬಾಲಗೋಪಾಲ ಎಲ್ಲ ರನ್ನೂ ಸೇರಿಸಿ, ಒಂದು ಪ್ರತಿಭಟನಾ ಸಂಘ ಸ್ಥಾಪಿಸುತ್ತೇನೆ. ಅದರ ಸದಸ್ಯರೆಲ್ಲರೂ, ದಿನವೂ ಆ ಚಂದ್ರಹಾಸ ಮಂದಿರಕ್ಕೆ ಹೋಗಿ, ಹದಿನೆಂಟಾಣೆ ಟಿಕೇಟಿನವರೆಲ್ಲ ಹದಿಮೂರಾಣೆ ಸೀಟಿಗೆ, ಹದಿಮೂರಾಣೆಯವರೆಲ್ಲ ಒಂಬತ್ತಾಣೆಗೆ, ಹೀಗೆ ಕ್ರಮವಾಗಿ ಕಡಮೆದರದ ಸೀಟಿನ ಟಿಕೇಟು ಕೊಂಡು ಕೊಂಡು, ಅಲ್ಲೇ ಕೂರ

ಬೇಕು, ತಗಣೆ ಗಿಗಣೆ ಒಂದನ್ನೂ ಲೆಕ್ಕಿಸಬಾರದು" ಅಂದ. "ದಿನವೂ ಪ್ರತಿಯೊಂದು ಸಾಲಿಗೂ ನಷ್ಟವಾಗುತ್ತಲೇ ಇರಲಿ ದರೋಡೆ ಕೋರನಿಗೆ" ಅಂದ.


ಪ್ರತಿಭಟನಾ ಸಂಘದ ಸದಸ್ಯರಷ್ಟೆ ಸಹಿತ, ಹೊರಟೇಬಿಟ್ಟ. ಅವನ ವಾಚಾಲತ್ವಕ್ಕೆ ಊರಿನವರೆಲ್ಲ ಮರುಳಾದರು. ಮೊನ್ನೆ, "ಚಂಡ ಪ್ರಚಂಡ" ಎಂಬ ಚಿತ್ರ ನಮ್ಮೂರಿಗೆ ನಾಲ್ಕನೆಯಬಾರಿ ಬಂತಲ್ಲಾ, ಅದೇ ಥಿಯೇಟರಿಗೆ.... ಅವತ್ತು "ಮುಷ್ಕರ" ಪ್ರಾರಂಭವಾಯಿತು.

ಬಸವರಾಜುವಿನ ತಂತ್ರ ಚೆನ್ನಾಗಿ ಫಲಿಸಿತು. ಎಲ್ಲರೂ ನುಗ್ಗಿದರು; ಅವತ್ತು ನಾಲ್ಕಾಣೆ ಪ್ರಭೃತಿಗಳೊಬ್ಬರಿಗೂ ಟಿಕೇಟೇ ದೊರೆಯಲಿಲ್ಲ; ಆರಾಣೆಯವರು ಎರಡೆರಡಾಣೆ ಉಳಿಸಿ, ಈ ಜಾಗವೆಲ್ಲ ಆಕ್ರಮಿಸಿಕೊಂಡರು. ಆರಾಣೆ ಬೆಂಚಲ್ಲೆಲ್ಲ ಒಂಬತ್ತಾಣೆಯವರು ಭರ್ತಿ. ಹದಿಮೂರಾಣೆಯವರಿಗೆಲ್ಲ ನಾಲ್ಕಾಣೆ ಲಾಭ, ಒಂಬತ್ತಾಣೆ ಬೆಂಚುಗಳು ಇನ್ನೂ ಎಂಟು ಹಾಕಬೇಕಾಗಿ ಬಂತು. ಒಗ್ಗಟ್ಟು ಅಂದರೆ, ಅದು, ಹದಿನೆಂಟಾಣೆಯವರು ಹದಿಮೂರಾಣೆಗೆ ಇಳಿದರು. ಆದರೆ, ಅವರ ಸಂಖ್ಯೆ ಎಷ್ಟು ಹೆಚ್ಚಾಗಿತ್ತು ತಂದರೆ, ಆ ಬಡಪಾಯಿ ಮಾಲೀಕ ತನ್ನ ನೂರಮೂಲು ಹದಿನೆಂಟಾಣೆ ಸೀಟುಗಳನ್ನೂ ಹದಿಮೂರಾಣೆಗೆ ಇಳಿಸಿ ಮುಖಕ್ಕೆ ಮಸಿ ಹಚ್ಚಿಕೊಂಡ. ಅಷ್ಟು ಜನ ಎಂದೂ ಅಲ್ಲಿ ತುಂಬಿರಲಿಲ್ಲ.

ಆದರೂ, ಆತನ ಮುಖದಲ್ಲಿ ಗೆಲುವಿನ ಚಿಹ್ನೆ ಸುಳಿದಾಡಿತು. ಮನುಷ್ಯ ಸೋಲಲಿಲ್ಲ. ನಾವು ಊರಿನವರು ನಿರಾಶರಾಗದೆ, ಆರು ತಿಂಗಳು ನಡೆಸಿದೆವು, ನಮ್ಮ ಮುಷ್ಕರವನ್ನ. ದಿನವೂ ಸಂಜೆ ಆಯಿತು ಅಂದ್ರೆ ಊರಿನವರೆಲ್ಲ ನುಗ್ಗಿ ಕಾಸುಳಿಸಿ ಕೆಳಗಿನ ಗ್ರೇಡಿನಲ್ಲಿ ಕೂತು ಚಿತ್ರನೋಡಿ ಹಿಂದಕ್ಕೆ ಬಂದುವು.

ನಿನ್ನೆ ಆ ಮಾಲೀಕ ಹೊಸ ಚಿತ್ರಮಂದಿರ, ಇನ್ನೊಂದು, " ಏಕಾನಾ " ಎಂಬುದರ ಉದ್ಘಾಟನಾ ಸಮಾರಂಭ ನೆರವೇರಿಸಿದ. ಇವತ್ತು,.... ಕಡೆಗೆ, ಇವತ್ತು, ಹಿಂದಿನ ರೇಟುಗಳಿಗೇ ಮತ್ತೆ ತಂದ. ಒಂದೊಂದಾಣೆ ಇಳಿಸಿದ.

— ಪಾಟಾಳಿ.



ಟಾರ್ ಬೀದಿಯ ನಟ್ಟನಡುವೆ

ಬಿಡಿಸಲಾರದಿರುವ ಬಾಳಿ–
ನೊಗಟಿಯೊಂದರಂದದಿ
ನಮ್ಮ ನಾಡು ಪುರಾತನದ
ಸಂಪ್ರದಾಯದಂದದಿ
ನಮ್ಮ ದೇಶಕೊಲಿದುಸಿಂತ
ದಾರಿದ್ರ್ಯದ ತೆರದಲಿ
ಟಾರ್ ಬೀದಿಯು ಮಲಗಿದ್ದಿತು
ತನ್ನ ಮೆಯ್ಯ ಚಾಚುತ
ಶಾಪದಂತೆ ತೋರುತೆ!

ದೇವಲೋಕದವರು ನಗಲು
ಅವರ ಹಲ್ಲ ಮಿಂಚೊಲು
ಬೆಳಗಿನ ಬಿಸಿಲಿಳಿದುಬಂದು
ಬೀದಿಯನ್ನು ತಬ್ಬಲು
ಅತ್ತ ಇತ್ತ ಸಾಲುಮರವು
ತಮ್ಮ ನೆಳಲ ಮಸಿಯನು
ಬಿದ್ದು ಟಾರುಬೀದಿಗೆಸೆದು
ಬೈದು ಸುಯ್ದು ನಿಲ್ಲಲು
ಇತ್ತು ದಾರಿ ಶವದೊಲು!

ಟಾರ್ ಬೀದಿಯ ನಟ್ಟನಡುವೆ
ಕರಿಯನಾಯಿ ಮಲಗಿದೆ!
ಟಾರ್ ಬೀದಿಯ ಅಲಸಮನಸು
ಮೆಯ್ಯ ಪಡೆದಹಾಗಿದೆ

ಬೆಚ್ಚಗಿರುವ ಬಿಸಿಲ ಹೊದ್ದು
ಸುಮ್ಮನಲ್ಲಿ ಬಿದ್ದಿದೆ
ಮಾವನ ಮನೆಯಲ್ಲಿ ನೆಲಸಿ
ಕದಲದಳಿಯನಂತಿದೆ
ಒಂದಿನಿತೂ ಅಲುಗದೆ.

ತ್ಯಾಗಿಯೆಡೆಗೆ ಹಾರಿಬರುವ
ಮರ್ತ್ಯದಾಸೆ ಯಂದದಿ
ಹಾರಿಬಂದ ನೂರು ನೊಣವ
ತಿರಸ್ಕರಿಸುವಂದದಿ
ಬಿಡುತೆಗೊಂಡ ನಮ್ಮನಾಡ
ಯುವಕ ಶಕ್ತಿಯಂದದಿ
ನಿರಾಸಕ್ತ ಚಿತ್ತವಾಗಿ
ನಾಯಿಯೊಂದು ಮಲಗಿದೆ
ಏನೊ ಕನಸ ಕಂಡಿದೆ!–

ಕಳೆದ ಜನ್ಮದಲ್ಲಿ ಪಟ್ಟ
ಸಿರಿಯ ಸುಖದ ಸೊಬಗನು,
ಹೆತ್ತು ಜನರ ಹಾಳುಮಾಡಿ
ತಾನು ಮೆರೆದ ಪರಿಯನು
ಇಂದು ನಾಯಿ ಜನ್ಮ ಬಂದು
ನರಳುತಿರುವ ನೋವನು
ನೆನೆಯುತಿರಲು ಪಕ್ಕದಲ್ಲಿ
ಏನೊ ಸರಿದು ಹೋಗಲು
ನಾಯಿ ಕಣ್ಣ ತೆರೆಯಲು–

ಪಕ್ಕದಲ್ಲಿ ಒಂದು ಕಾರು
ಭರ್‍ರೆಂದು ಸರಿಯಿತು.
ಕನಸು ಕಾಣುತಿದ್ದ ಕಣ್ಗೆ
ಧೂಳನೆರಚಿ ನಡೆಯಿತು
'ಇಷ್ಟೇತಾನೆ?' ಎಂದು ಕೊಂಡು
ಮತ್ತೆ ಅಲ್ಲೆ ಮಲಗಿತು
ಮತ್ತೆ ಕನಸಿಗಿಳಿಯುತಿರಲು
ಜಟಕವೊಂದು ನಡೆಯಿತು
ನಿದ್ರೆಯನ್ನು ಕೆಡಿಸಿತು!

'ಹಾಳು ಜಟಕ ಲಾರಿ ಕಾರು
ಏಕೆ ಇಲ್ಲಿ ಇರುವುವೋ
ಬೇರೆ ದಾರಿ ಯಿಲ್ಲವೇನು?
ಅಲ್ಲಿ ನಡೆಯ ಬಾರದೋ?
ಎಂದುಕೊಂಡು ನಟ್ಟನಡೂ
ಬೀದಿಯಲ್ಲೆ ಮಲಗುತ
ಸ್ವಾತಂತ್ರ್ಯವ ಪಡೆದ ನಮ್ಮ
ಸತ್ಪ್ರಜೆಗಳ ಹೋಲುತ
ಇತ್ತು ಕನಸು ಕಾಣುತ!

—ದಿಬ್ಬಯ್ಯ.

— o —



ಪುಟ್ರಂಗಯ್ಯನ ಪ್ರಶ್ನೆ

ಆಗಾಗ ದೂರದ ನಾಯಿಯ ಕೂಗು. ಪಕ್ಕದ ಹಳ್ಳಿಯಲ್ಲಿ ನಡೆಯುತ್ತಿದ್ದ ಬೈಲಾಟದ ಕುಣಿತದ ತಾಳದ ಮದ್ದಲೆಗಳ ಸೊಗಸಾದ ನಾದ ಸಣ್ಣಗೆ ತಣ್ಣಗೆ ಬೀಸುತ್ತಿದ್ದ ಗಾಳಿಯಲ್ಲಿ ತೂರಿಬರುತ್ತಿತ್ತು. ತುಂಬಿನ ಕೆರೆಗೆ ಹೋದವನು ಆ ರಾತ್ರಿ ಅಲ್ಲೇ ಉಳಿದುಕೊಳ್ಳಬೇಕಾಗಿಬಂತು. ಮಹದೇವಮಾವನ ಜುಲುಮೆಗೆ ಯತ್ನವಿಲ್ಲದೆ ನಿಂತಿದ್ದೆ. ಮನೆ ಮುಂದೆ ಸಾರಿಸಿ ಗುಡಿಸಿ ರಂಗೋಲೆ ಇಕ್ಕಿ ಈಚಲ ಚಾಪೆ ಹಾಸಿ ಕೊಟ್ಟಿದ್ದ ಮಹದೇವ ಮಾವ. ಹಾಸಿಗೆಗೆ ಒರಗಿ ಕೂತಿದ್ದೆ—ಮಾವ ಅಲ್ಲೇ ಕೂತಿದ್ದ ಎದುರಿಗೆ ಎಲೆ ಅಡಿಗೆ ತಾಟ್ಟು—ಕವಳಿಗೆ ಎಲೆ ಪಾವು ಅಡಿಕೆ ಕಾಡುಪತ್ರೆ ಲವಂಗದ ಮಸಾಲೆ ಜೋತೆ ಘಮಘಮಿಸುವ ಸುಣ್ಣ. ಬೆಂಗಳೂರಿನ ಅವಾಂತರದ ಊಟಕ್ಕೂ ಜಾಗವಿಲ್ಲದ ಮನೆಗೂ ಒಣಗಿದ ಎಲೆಗೂ ಈ ತುಂಬಿನಕೆರೆಯ ರಸಗವಳಕ್ಕೂ ಹೋಲಿಸುವಂತೇ ಇಲ್ಲ. ಅವನತಿ ದೂರದಲ್ಲೇ ಪುಟ್ರಂಗಯ್ಯ ಕಂಬಳಿ ಹೊದ್ದು ಕೂತಿದ್ದ ಆ ಬೆಳಳಂಗಳು—ಆ ಗಾಳಿ—ಎಲೆ ಅಡಿಕೆ—ದೂರದ ಸಂಗೀತ ಸ್ವರ್ಗಕ್ಕೆ ಹೊಟ್ಟೆಕಿಚ್ಚು ಈ ಸೊಗಸು ಕಂಡು. ಆಗಾಗ ಪುಟ್ರಂಗಯ್ಯ ಮಾವಯ್ಯ ನೆದುರು ಹೊಲದ ತೋಟದ-ಸಮಸ್ಯೆಗಳನ್ನು ಕುರಿತು ಹೇಳುತ್ತಿದ್ದ.

ಪುಟ್ರಂಗಯ್ಯ ನಮ್ಮ ರೈತ. ಬಲು ಮಾತುಗಾರ. ವಿಷಯ ತಿಳಿದುಕೊಳ್ಳುವ ಆತುರಉಳ್ಳ ಹಳ್ಳಿಯ ಎಬ್ಬಂಕನೆಂದು ಹೇಳುವಂತಿಲ್ಲ. ಅವನು ಎಲ್ಲಾ ತಿಳಿದವ, ನಾವೇ ದಡ್ಡರು ಎಂಬ ವಾದ ಅವನದು. ಸ್ಕೂಲು ವಿದ್ಯೆ ಇದ್ದರೆ ಸರ್ಕಾರಿ ನೌಕರನಾಗಬಹುದು. ಅದೇ ಹೊಲಗೆಲಸ ಕಲಿತರೆ ಹೊಟ್ಟೆತುಂಬ ಉಣ್ಣ ಬಹುದೆಂಬುದನ್ನು ಮನದಟ್ಟು ಮಾಡಿಕೊಂಡಿರುವ ಕಿಲಾಡಿ ನಮ್ಮ ಪುಟ್ರಂಗು. ಆ ಮಾತು ಈ ಮಾತುಗಳಿಂದ ವಿಷಯ ವರ್ತಮಾತ ಪತ್ರಿಕೆಗಳ ಕಡೆ ಹೊರಳಿತು. ಪುಟ್ರಂಗಯ್ಯ ಕೇಳಿದ "ನೀವು ಯಾವ ಪೇಪರು ಸ್ವಾಮಿ ಕೆಲಸ ಮಾಡೋದೂ?" ಅಂತ. ಹೆಮ್ಮೆ ನಾನು ಮಾಡುವ ಕೆಲಸದ ಹಿರಿಮೆ—ಬಹು ಬುದ್ಧಿ ಮತ್ತು ಕಲ್ಪನಾ ಶಕ್ತಿಯುಳ್ಳವರಿಗೆ ಮಾತ್ರ ಸಾಧಿಸಬಲ್ಲ ಪತ್ರಿಕೋದ್ಯಮದ ಬಗ್ಗೆ ಪುಟ್ರಂಗು ಪ್ರಶ್ನೆ ಹಾಕಿದ್ದು ನನಗೆ ಹುಮ್ಮಸ್ಸು ಕೊಟ್ಟಿತು. "ಪ್ರಜಾ ಬಂಧು" ಎಂದು ಗಂಭೀರವಾಗಿ ಹೇಳಿದೆ. ಆ ಹೇಳುವಿಕೆಯಲ್ಲಿ ಇಡೀ ಪ್ರಜಾ ಸಮುದಾಯದ ಬಂಧುವಿಗೆ ಕಾರಣ ಕರ್ತನಂತೆ ಹೇಳಿದೆ.

“ ಪ್ರಜಾಬಂಧು ...ಅಡಡ.... ಪ್ರಜೆಗಳು ಅಂದರೆ ನಾವು ಸೇರ್ಕೊಂಡು ಬಂದೆ ವಲ್ಲ.... ಒಟ್ನಲ್ಲಿ ನಮ್ಮ ಬಂಧುಗಳೂನ್ನಿ....”

“ ಹೌದು.... ದೇಶದ ಹಿತಕ್ಕಾಗಿ ದುಡಿಯುವ ಪತ್ರಿಕೆ....”

ಈ ಮಾತಿಗೆ ಮಾತ್ರ ಪುಟ್ರಂಗು ಸುಮ್ಮನಿರಲಿಲ್ಲ—ಗಹಗಹಿಸಿ ಕೇಕೆ ಹೊಡೆದು ನಕ್ಕ ಬಾಯಲ್ಲಿ ತುಂಬಿದ ತಂಬಾಕು ಎಲೆ ಅಡಿಕೆ ಇವುಗಳು ಅಡಚಣೆ ಮಾಡಿದ್ದ ರಿಂದ ನಾನು ಪೆಚ್ಚಾಗುವಷ್ಟು ನಗು ಮೇರೆ ಮೀರಲಿಲ್ಲ.

“ ಯಾಕಪ್ಪಾ ಈ ಕೊಂಗು ನಗು.... ನಿನಗೆ ಅರ್ಥವಾಗದ್ದಕ್ಕೆ” ಎಂದು ಅವ ನನ್ನು ಎಚ್ಚರಿಸಿದೆ ಅವ ಕೇವಲ ಭಾವಿಯೊಳಗಿನ ಕಪ್ಪೆ ಎಂಬುದನ್ನು ಮನದಟ್ಟು ಮಾಡಿ ಕೊಡುವುದು ಮಾತ್ರ ಈ ನನ್ನ ಮಾತು ಆಡಿದ್ದು. ಅವನ ನಗು ನಿಲ್ಲದ್ದು ಕಂಡು ನಾನೇ ಕೆದಕಿದೆ. “ ಬಾವಿಯೊಳಗಿನ ಕಪ್ಪೆ.... ಅದು ಜಗತ್ತು ಆ ಭಾವಿಯಷ್ಟೆ ಅಂತ ತಿಳಿದಿರುತ್ತೆ....” ಎಂದೆ. ಸರಸರನೆ ಪುಟ್ರಂಗು ಎದ್ದು ಹೋಗಿ ಬಾಯಲ್ಲಿನ ಎಲೆ ಅಡಿಕೆ ಉಗುಳಿ ಬಂದ. ಮಹದೇವ ಮಾವಯ್ಯ ಗೊರಿಕೆ ಹೊಡೆಯುತ್ತಿದ್ದ. “ ಹೌದು ನಿಮ್ಮ ‘ ಪ್ರಜಾಬಂದು ’ ಭಾವಿಯೊಳಗಿನ ಕಪ್ಪೆ....” ಎಂದ ಪುಟ್ರಂಗು. ನನ್ನ ತಲೆ ತಿರುಗಿತು, ಎಲಾ ತುಂಬಿದಕೆರೆ ಕೆರೆಕೆಳಗಿನ ಗದ್ದೆ ಮಾಡೋ ಈ ಮುಂಡೇದು—ರಾಯಿಟರ್ P.T.I. ಸುದ್ದೀನ ಪ್ರಪಂಚದ ಮೂಲೆ ಮೂಲೆಗಳಿಂದ ತರಿಸಿ ಪ್ರಜೆಗಳಿಗೆಲ್ಲಾ ಸಮಾಚಾರಾಹಂಚೊ ಪೇಪರಿಗೆ ಭಾವಿಯೊಳಗಿನ ಕಪ್ಪೆ ಅಂತಾ ನಲ್ಲಾ ಇವನ ಬುದ್ಧಿಯ ಮಟ್ಟಕ್ಕೆ ಏನು ಹೇಳೋಣ. ಹೂಂ ಮೂರ್ಖ ಅಂದು ಕೊಂಡು “ ಹೌದಪ್ಪಾ! ನಮ್ಮ ಪೇಪರು ಭಾವಿಯೊಳಗಿನ ಕಪ್ಪೆ—ನೀನುಮಾತ್ರ ಪ್ರಪಂಚ ಕಂಡವನು” ಎಂದು ಹಂಗಿಸಿದೆ. “ ಸರಿ ಹಾಗೆ ಒಪ್ಪಿಕೊಂಡರೆ ಸಂತೋಷ.... ಈಗಲೆ ನೀವು ಹೆಸರನ್ನ ‘ ಭಾವಿಭಂಧು ’ ಅಂತ ಬದಲಾಯಿಸಿದರೆ ಸರಿ ಹೋಗುತ್ತೆ” ಎಂದನ್ನಬಹುದೆ ಆ ಪುಟ್ರಂಗು!! ನಮ್ಮ ಪತ್ರಿಕೆ ಮಾಡುತ್ತಿರುವ ಜನ ಸೇವೆಯನ್ನು ವಿವರಿಸಿ ಇವನ ಈ ಮೂರ್ಖತನ ತಿಕ್ಕಿ ತೊಳೆದು ಪಾಲಿಷ್ ಹಾಕಿ ತೋರಿಸಿ ಕೊಡಬೇಕಾದ್ದುನನ್ನ ಕರ್ತವ್ಯವಾಗಿಕಂಡಿತು. “ ಅಣ್ಣಾ ಪುಟ್ರಂಗು.... ಇಲ್ಲಿ ಕೇಳು. ನೀನು ಹಾಗೆಲ್ಲಾ ಅನ್ನಬಾರದು. “ ವಿಷಯ ತಿಳಿದುಕೊಂಡು ಮಾತಾಡು ನಮ್ಮ ಪೇಪರು ನೀನು ಓದಿದ್ದೀಯಾ?”

“ ನಾನು ಓದಿಲ್ಲ ಸ್ವಾಮಿ....”

“ ಅಂದಮೇಲೆ ನೀನೆನ್ನುವುದರಲ್ಲಿ ಅರ್ಥವಿಲ್ಲ ಎಂದು ನೀನೇ ಒಪ್ಪಿಕೊಂಡಂ ತಾಯಿತಲ್ಲಾ ?....”

“ ನಾನು ಓದದಿದ್ದರೆ ಓದಿಸಿ ಕೇಳೋಕೆ ಏನು ಸ್ವಾಮಿ.... ನಮ್ಮ ಹೈದ ಹುಚ್ಚೆ ಗೌಡ್ರ ಮಗನ್ನ ಕೂಡಿಸಿಕೊಂಡು ಪಂಚಾಯಿತಿಗೆ ಬರೋ ಪೇಪರ ವಿಷಯನೆಲ್ಲಾ

ಕೇಳಿಕೋತೀನಿ....ಆಸಕ್ಷ್ನ ತಿಳಿಕೊಂಡೇ ಹೇಳಿದ್ದು ಭಾವಿಬಂದು ಅಂತ ಹೆಸರು ಬದಲಾಯಿಸೂಂತ........" ನಾನು ಸುಸ್ತು. ನಮ್ಮ ಪತ್ರಿಕೇಲಿ ಇವ ಕಂಡ ತಪ್ಪಾದರೂ ಏನು?

"ಪುಟ್ರಂಗು ನಮ್ಮ ಪತ್ರಿಕೇಲಿ ಏನು ದೋಷ ಕಂಡೆ ಹೇಳು ನಿನಗೆ ಸರಿಯಾದ ಉತ್ತರ ಕೊಡ್ತೇನೆ........"

"ಮಲ್ಲೇಶ್ವರದಲ್ಲಿ ಇದ್ದಕ್ಕಿದಂತೆ—ಹೇಳದೆ ಕೇಳದೆ ನೀರು ನಿಂತೋದಕ್ಕೆ ಪ್ರಜಾಬಂದು ತುಂಬ ಬರೆದಿದ್ಯಾಲ್ಲಾ ನೆಪ್ಪೃತಾ?"

"ಹೌದು....ಅಲ್ಲಿನ ಗೃಹಿಣಿಯರಿಗೆ ನೀರು ನಿಂತು ಮೂರು ಘಂಟೆಕಾಲ ಬಹಳ ತಾಪತ್ರಯವಾಗಿಹೋಯ್ತು—ಜನರ ಸರ್ಕಾರದಲ್ಲಿ ಇಂಥ ಅನ್ಯಾಯ ನೆಡೆಯೋದೂಂದರೇನು? ಹುಡುಗಾಟವೆ ಹೇಳದೆ ಕೇಳದೆ ನೀರು ನಿಲ್ಸಿಬಿಡೋದೂಂದ್ರೆ"


"ಹೌದು ಬಿಡಪ್ಪಾ ಅಲ್ಲಿ ಹೆಂಗಸರಿಗೆ ಕೊಡ ನೀರು ಸೇದಿದ್ರೆ ಬಲೇ ತೊಂದ್ರೆ ಆಯ್ತು—ಬೆಳಿಗ್ಗೆ ನೊಡ್ದ ನಮ್ಮ ತುಂಬಿನಕೆರೆ ಹೆಣ್ಣುಮಕ್ಕಳು ಮೂರು ಮೈಲಿ ನಡೆದು ಮನೆಗೆ ನೀರು ತಂದದ್ದು! ಕೆರೆ ಕೆಳಗಿನ ಗದ್ದೆ ನೀರಿಗೆ ತೂಬಿನ ವಿಚಾರ ಜಗಳವಾಗಿ ಪುಟ್ಟಯ್ಯನೋರಿಗೂ ಸಿದ್ದಪ್ಪನೋರಿಗೂ ಹೊಡೆದಾಟ ಆಗಿ ಊಟ ಕೊಡೊ ಗದ್ದೆ ವಣಗಿ ಹೋಗೋಹಂಗೆ ಆಗಿದ್ದಾಗ ಒಂದಕ್ಷರ ಬರದ್ಯಾ ನೀನು ಈ ವಿಷಯಾನ! ಪಕ್ಕದ ಹಳ್ಳಿಲಿ ಬಾವಿನೇ ಇಲ್ಲ—ಬತ್ತಿಹೋಗ್ಯೆತೆ, ಕೇಳೋರ್ಯಾರು? ಅದಕ್ಕೆ ನಾ ಬಡಕೊಂಡದ್ದು ನಿನ್ನ ಪೇಪರ್ರು 'ಭಾವಿಬಂಧು' ಇಲ್ಲ 'ಬೆಂಗಳೂರು ಬಂಧೂಂ'ತ........ಪ್ರಜಾಬಂಧು ಅಂತೆ ನಾಚಿಕೆ ಆಗೊಕಿಲ್ಲೇನಯ್ಯಾ ಹೇಳ್ಕೊನೋಕೆ?...." ಎಂದು ಬರೆಹಾಕಿದಂತೆ ಹೇಳಿಬಿಟ್ಟ. ನಾನು ಸುಸ್ತು. ಪಾಪ ಅವ ಕೇಳಿದ್ದು ನಿಜ, ನಾವು ಭಾವಿಯೊಳಗಿನ ಕಪ್ಪೆಗಳು. ತಲೆ ತಗ್ಗಿಸಿ ಯೋಚಿಸ ತೊಡಗಿದ್ದೆ. ಅವನೇ ಹೇಳಿದ. "....ಇಲ್ನೊಡಪ್ಪಾ....ನಿನ್ನ ಹೊಟ್ಟೆ ಪಾಡಿಗೆ ಪೇಪರು ಮಾಡ್ಕೊತಿನೀನ್ನು ಒಪ್ಕೊತೀನಿ—ಪ್ರಜಾಬಂಧು ಆಗ್ಬಿನೀಂದ್ರೆ ನಾನೊಪ್ಪೊಕಿಲ್ಲ. ಅಮೆರಿಕಾದ ಹತ್ತಿರ ಬಸ್ಸು ಬಿದ್ದು ಹತ್ತು ಜನ ಸತ್ತರೆ ನನಗೇನಯ್ಯಾ ಆದದ್ದು. ಬಿಸಸನೂರಲ್ಲಿ ಹೊಟ್ಟೆಗಿಲ್ದೆ ಹನ್ನೊಂದು ಜನ ವದ್ದಾಡ್ತಾಇರೋ ವಿಷಯ ಬರೆಯೋಕೆ ನಿನಗೇನು ಬಂದಿರೋದು ಬ್ಯಾನೆ? ಉಳೋನು ಕಷ್ಟ ಏನು—ಅವ ಬದುಕಿದರೆ ಹೊಟ್ಟೆ ತುಂಬ ಅನ್ನ—ಅವನ ಎತ್ತಿಗೆ ಹುಲ್ಲು ಬೇಕು—ಅವನಿಗೆ ಬಿತ್ತನೆ ಬೀಜ ಬೇಕು—ಈ ವಿಚಾರವಾಗಿ ತಿಳಿದೋರ ಕೈಲಿ ಬರಸು—ಲಂಡನ್ನಲ್ಲಿ ಎರಡು ತಲೆ ಮಗು ಹುಟ್ಟಿದರೆಷ್ಟು ಬಿಟ್ಟರೆಷ್ಟು....ಯೋಚನೆಮಾಡು. ಅದೆಲ್ಲಾ ಹಳೇ ಕಾಲ್ದಲ್ಲಿ ಬ್ರಿಟಿಷ್‌ನೋರ ಕಾಲಕ್ಕೆ ಇತ್ತು ಈಗ ಯಾಕಯ್ಯಾ ಇಂಥ ಸಮಾಚಾರ—ನಾನು ಹೇಳ್ದಂಗೆ ಕೇಳು—ನನಗೆ ಓದಾಕೆ ಬರಾಕಿಲ್ಲ. ವಿಚಾರ ತಿಳಿತೈತೆ ನನಗೆ—ಅವರಿಗೆ ಸತ್ಕಾರ ಇಲ್ಲಿ ಲಕ್ಷರ್ರು—ಬೆಂಗಳೂರಲ್ಲಿ ಮೋಟಾರು ನಿಂತುಹೋತ್ತು ಇವೆಲ್ಲಾ ಚಿಲ್ರೆ

ವಿಷಯ ಬರಿಬ್ಯಾಡ. ನಿನ್ನ ಹೆಸರು ನಿಜವಾಗಿ ಪ್ರಜಾಬಂಧು ಆಗಬೇಕೂಂದ್ರೆ ನಮ್ಮೂರಂಥ ಹಳ್ಳಿ ವಿಷಯ ಬರಿ—ಅದು ಬಿಟ್ಟು—ಬೆಂಗಳೂರಲ್ಲಿ ನೀರು ನಿಲ್ತು ಅದಕ್ಕೆ ಅಗ್ರಲೇಖನ ಊರಾಗಿರೋರೆಲ್ಲಾರ ಲಗ್ನದ ಬಾಬತ್ತು—ಬರೀ ಜಾಹಿರಾತು—ಇವೆಲ್ಲಾ ನಮಗೆ ಬಂದಿರೋ ಕಷ್ಟಗಳೇನು ಸಾಧಾರಣಾನಾ? ತಕಾವಿ ಸಾಲ ಭಾವಿ ತೊಡೋಕೆ ಕೊಡ್ತಾರಲ್ಲಾ ತೋಡ್ತೌರಾ! ಇದರ ವಿಚಾರ ಬರಿಯೋ ನಿನ್ನ ಮನೆ ಹಾಳಾಗ....ಏನು ಮೂತಿ ನೋಡ್ತಿಯಾ!" ಎಂದು ನಿರರ್ಗಳವಾಗಿ ಒಂದೇ ಸಮ ನನ್ನ ಮೈ ಥಳಿಸಿ ವದರಿಬಿಟ್ಟ ಪುಟ್ರಂಗು. ಅವನು ಹೋಳೋದರಲ್ಲಿ ಶೇಕಡ ಮುನ್ನೂರು ಪಾಲು ನಿಜವಿತ್ತು. ನಾವು ಮಾಡ್ತಿದ್ದೇವೆ ಅಂದ್ಕೊಂಡಿರೋ ಪತ್ರಿಕೊದ್ಯೋಗ್ಯದ ನಗ್ನ ಚಿತ್ರ ಪುಟ್ರಂಗು ನನ್ನ ಮುಂದೆ ಚಿತ್ರಿಸಿಟ್ಟಿದ್ದ.

ಆದರೆ ನಾನೇನೂ ಮಾಡುವಂತಿರಲಿಲ್ಲ. ನಾನಲ್ಲಿ ಕೇವಲ ಉಪಸೊಂಪಾದಕ-ಅವ ಹಾಕಿದ ಬರೆ ಮಾಲೀಕರ ಮೇಲೆ ಮತ್ತೆ ಮೂಡಿಸುವ ಗಂಡಸ್ತನ ನನಗುಂಟೆ? ಪುಟ್ರಂಗಯ್ಯನನ್ನು ನಾನು ಮಾತಾಡಿಸಲೇ ನಾಚಿಕೆಯಾಯ್ತು. ಏನೂ ಹೇಳಲಾರದೆ ತಲೆ ತಗ್ಗಿಸಿದೆ. ಅವನೇ ಹೇಳಿದ.

"ನೀ ಯಾಕೆ ತಲೆ ತಗ್ಗಸ್ತೆಯಪ್ಪಾ....ಹೆಸರಲ್ಲೇನೈತೆ—ಪ್ರಜಾಬಂಧು ಅಂದ ಮಾತ್ರಕ್ಕೆ ಅದೇ ಆಗಬೇಕೇನು?....ಓದಿಸಿ ಕೇಳೋ ನಾನೇ ಹಿಂಗೆ ಹೇಳೋದೂಂದ್ರೆ ಓದಿ ತಿಳಿಯೋ ಜಾಣರು ನಿಮ್ಮ ವಿಷಯ ಕೊಡಬೇಕಾದ ಮರ್ಯಾದೆ ನನಗಿಂತ ಚೆನ್ನಾಗೇ ಕೊಡ್ತಾರೆ...." ಮರ್ಯಾದೆ ಮಾಡಿ ಕಂಬಳಿ ಹೊದ್ದು ಮುಗಿದ. ನನಗೆ ನಿದ್ದೆಯೇ ಬರಲಿಲ್ಲ—ಏನೋ ಕಸವಿಸಿ—ರಾತ್ರೊ ರಾತ್ರಿ ಅಲ್ಲಿಂದ ಕಂಬಿ ಕಿತ್ತು ಬೆಂಗಳೂರು ಬಂದುಸೇರಿದೆ.

—ದಾಶರಥಿ ದೀಕ್ಷಿತ್.



ಕಲ್ಯಾಣದ ಕಾಳಗ

ಹರೀಶಚೆಂದ್ರ ಅಂತ ಒಬ್ಬ ರಾಜ. ಔನ ಹೇಣ್ತಿ ಶೆಂದುಮತಿ. ಔರ ಮೊಗ ಲೋಹಿತಸ್ಪ. ಹರೀಶಚೆಂದ್ರ ಭೋ ಸತ್ಯೆವಂತ. ಔನೆಂದೆದೂ ಸುಳ್ಳೇಳ್ದೊನಲ್ಲ. ಅನಂತ ರಾಜರು ಯಿಂದಿದ್ದರೋ ಯಿಂಗೋ, ಯೀಗಂತೂ ಯಿಲ್ಲ—ಮುಂದಕ್ಕೊ ಖಂಡಿತ ವುಟ್ಟಲ್ಲಾಂತ ಕಾಣುತ್ತೆ. ಹರೀಶಚೆಂದ್ರನ ಮನೆ ಪುರೋಯ್ತ ವಸಿಷ್ಟ ಅಂತ. ಅವಂಗೆ ಹರೀಶಚೆಂದ್ರನ ಮೇಲೆ ಭೋ ಯಿಸ್ವಾಸ. ಅವನ ಸತ್ಯದ ವಿಚಾರ ಮ್ಯಾಗಳ ಲೋಕದ ಕೆಳಗಿಣ ಲೋಕದೆ ನಡುತಾವಳ ಲೋಕದಾಗೆಲ್ಲಾ ಅರಡಿಬಿಡುತು.

ಇಂಗೇನೆ ಇರಬೇಕಾದರೆ ಒಂದು ದಿವಸ ಮ್ಯಾಗಳ ಲೋಕದಾಗೆ ಯಿಂದ್ರ ಸಭೆ ಮಾಡಿಕೊಂಕೂತಿದ್ದ. ಅಲ್ಲಿ ವಸಿಷ್ಟಿನೂ ಇದ್ದ. ವಿಸ್ವಾಮಿತ್ರನೂ ಯಿದ್ದ. ಓರಿಬ್ಬರಿಗೂ ಎಣ್ಣೆಗೂ ಸಾಬೂನಿಗೂ ಇದ್ದೊಟು ವಿಸ್ವಾಸ. ವಿಸ್ವಾಮಿತ್ರಗೆ ಬಲೆ ಸಿಟ್ಟು, ಓನ ಸಿಟೊಂದ್ರೆ ಯೋಳಾಕಾಗಾಲ್ಲ. ಓನಿಗೇನರ ಸಿಟ್ಟು ಬಂತೂಂದರೆ ಸೈ ಎಲ್ಲನೂ ಸುಟ್ಟು ಕರಕಮಾಡಿಬಿಡೋನೆ. ಏನೇಳಾನ ಸೌರ್ಯವ. ವಸಿಷ್ಟಿಗೆ ಓಟೊಂದು ಸಿಟ್ಟಿಲ್ಲ. ಸೊಲ್ಪ ಮಿತಬಾಸಿ. ಆದರೇನು ಎಲ್ಲಾರ ಇಂತೋರಿಗೆ ಬಂತಪ್ಪಾ ಸಿಟ್ಟೊಂದ್ರೆ ಫೈಸಲ್.

ಯಿಂತಪ್ಪ ದ್ಯಾವೇಂದ್ರನ ಆಸ್ತಾನದ ನೆಲ ಮುಟ್ಟಿದರೆ ಚಿನ್ನಾಗೊಂತ ಕಲ್ಲಿನಾಗೆ ಮಾಡಿತ್ತಂತೆ. ಅಲ್ಲಿದ್ದೊರೆಲ್ಲ ಅದೆಂಗೆ ಚಿನ್ನಾಗದೆ ಇದ್ದರೊ ಏನೊ ದ್ಯಾವರೇ ಬಲ್ಲ. ಕವಿಗಳು ಯೇಳತಾರೆ ಅಂತ ಕಪಿಗಳು ನಾವೂ ನಂಬತೀವಿ. ಯಿಂಗೇ ಇರಬೇಕಾದರೆ ದ್ಯಾವರಾಜನ ಮನಶಿನಾಗೆ ಒಂದು ಯೋಚನೆ ಬರುತ್ತೆ. ಅದೇನಪ್ಪಾಂದ್ರೆ ಎಲಾ ನಡುತಾವಳ ಲೋಕದಾಗೆ ಯಾರಲಾ ವೊಳ್ಳೆ ನೆತ್ಯ ಯೇಳಾರು ಇಧಾರೆ ಅಂತ. ಯೀ ಯೇಚನೆ ಬಂದದ್ದೆ ಸೈ ಅಲ್ಲಿ ಕುಂತುದ್ದನಲ್ಲಾ ವಸಿಷ್ಟಿ ಅವನ್ನ ಕೇಳತಾನೆ. ಎಲೈ ವಸಿಷ್ಟಿ ಮಹಾರಾಜನೇ ನೀನು ಭೂಮಿಲೋಕದೆ ಯೇನೇನು ನಡೀತಿತೆ ಅನ್ನದೆಲ್ಲಾ ಗೊತ್ತು. ಅದ್ರಿಂದ ಯೇಳು ಯೇಳು ಅಲ್ಲಾರೊಳ್ಳೆ ಸತ್ಯಂತರೂ ಅಂತ ಕೇಳಿದ.

ಅದಕ ಓನು ಯೇಳಿದ. ಅಪ್ಪಾ ಹರೀಶಚೆಂದ್ರಾಂತ ಒಬ್ಬ ಇದಾನೆ. ಓನೆಂದೂ ಸಿಳ್ಳು ಯೇಳಿಲ್ಲಾಂತ ಕಾಣುತ್ತೆ. ನಂಗೆ ತಿಳಿದ ಮಟ್ಟಿಗೆ ಓನು ವಳ್ಳೆ ಸಾತ್ವಿಕ ಅಂದ.

ಆ ಮಾತು ಕೇಳಿದ ಕೂಡ್ಲೆ ಯಿಸ್ವಾಮಿತ್ರಗೆ ಇಲ್ಲದ ಸಿಟ್ಟೆಲ್ಲ ಬತ್ತು. ಓನಂದ ಏ ಬುಡು ಔನ್ಯಾತರ ಸತ್ತೆವಂತ. ಔನು ಬಾರಿ ಪಾಪಿಸ್ಟ. ಔನಿಗೆ ಮಕ್ಕಳಾಗಿರಲಿಲ್ಲವಂತೆ. ಅವಗ ಮಳೆದ್ಯಾವರಿಗೆ ಅರಿಕೆ ಕಟ್ಟಿಕೊಣನಂತೆ. ಯೇನಂತ ಅಂದರೆ ನನಗೆ ಮಕ್ಕಳಾದರೆ ವುಟ್ಟಿದಕೂಡಲೆ ನಿನ್ನ ಯಿಸರಾಗಿ ಶಿಗದು ತ್ಯಾರಣ ಕಟ್ತೇನಿ

ಅಂತ. ಅವಗ ಒಂದು ವೊಗ ಆತು. ಆಗ ಅವನು ಮಗಿನ ವ್ಯಾಗಿನ ಆಸೆಗೇ ಅದನ್ನು ಕೊಡಲಿಲ್ಲ. ದ್ಯಾವರು ಬಿಟ್ಟಾತಾ? ಅದಕ ಶಿಟ್ಟು ಬಂತು. ನಿನ್ನ ವೊಟ್ಟೆ ಯಾಗ ನೀರು ಶೇರಿಕಳ, ನಿನ್ನ ವೊಟ್ಟೆ ಹೂದಿಕಳ, ಅಂತ ಹರೀಶಚಿಂದ್ರಗೆ ಒಂದು ರ್ವಾಗ ಕೊಡತು. ಆ ರ್ವಾಗಾ ವುಸಾರಿ ಮಾಡಿಕಣಾಕೆ ಯಾರೋ ಒಬ್ಬ ರುಸಿಮಗನ್ನ ಕರೂದಿಮಾಡಿ ಕೊಂಡಬಂದನಂತೆ. ಆ ರುಸಿಗ ಮೂವೋರು ಮಕ್ಕಳಿದ್ರಂತೆ. ಅದ ರಾಗ ಯಿರೇಮಗನ್ನ ಕೊಡೂನಾಂತ ಅವ್ವ ಯೇಳಿದ್ಲಂತೆ. ಅದಕ ಅಪ್ಪಿದ್ದನೂ ಯೇ ವುಂಟಾ ನಂಗೆ ಪಿಂಡ ಆಕಾಕೆ ಬೇಡವಾ ಅವಾ. ಅಂತ ಅವನ್ನ ಕೊಡಾಕೆ ವಪ್ಪನಿಲ್ಲ. ಬೇಕಾರೆ ಆ ಕಿರಿಯಾನ್ನ ಕೊಟ್ಟುಬಿಡಾನ ಅಂದ. ಅದಕ ಅವ್ವಿದ್ದೊಳು ನಂಗೆ ಕಿರೀ ಮೊಗಾಂದ್ರೆ ಬೊ ಇಸ್ಟ. ನಾ ಕೊಡಲ್ಲ. ಬೇಕಾರೆ ನಡುಲ ಮಗನ್ನೆ ಕೊಡಾ ಣಾಂತೆ ಅಂದ್ಲು. ಆಗ ಹರೀಶಚಿಂದ್ರ ಅ ನಡುಲ ಮಗನ್ನೆ ಒಂದು ಸಾವಿರ ಆಸೂಗೆ ಕರೂದಿಮಾಡಿ ಕರಕೊಂಬಂದು ಒಂದು ಯಗ್ಗಣದಾಗೆ ಆ ವುಡುಗನ್ನ ಕಡದು ತನ್ನ ವೊಟ್ಟೆಹೂದು ಇಳೀಶಿಕಂಡ.

ಯಿಂಗೆನೇ ಬಾಳೊತ್ತು ಔರಿಬ್ಬರಗೂ ಮಾತಿನ ಗುದ್ಯಾಟ ನೆಡಿತು. ಔನೂ ಸೋಲವಲ್ಲ, ಈನೂ ಸೋಲವಲ್ಲ. ಮತ್ತೀ ಗುದ್ಯಾಟ ಯೆಂಗೆ ಬಗಿ ಅರೀಬೇಕಪಾ. ಬಲೆ ಕಸ್ಟಾಗಿಬಿಡತು. ಈ ಪಂಚಾವತಿಗೆ ಸೇರಿದೊರೆಲ್ಲ ಮಂಕಾಗಿ ಮೂಕಾಗಿ ಶುಮ್ಮಗೆ ಕುಂತುಬಿಟ್ಟರು. ರೆಂಬೆ ಹೂರ್ವಸಿ ಶುಚಿದೇವಿ ಎಲ್ಲಾ ತಾಪೆ ಕಟ್ಟತಾ ಇದ್ದೋರು ಇದ್ದಕಿದ್ದಂಗೆ ಗುಮ್ಮಾಗೋದರು.

ಆಗ ವಸಿಷ್ಟಿ ಅಂದ ಔನೆಲ್ಲಾರ ಯಾವಾಗಲಾರ ಇನ್ನು ವ್ಯಾಕೆ ಸುಳ್ಳು ಯೇಳಿ ದಾಂದ್ರೆ ನಾನು ತಪ್ಪಸು ಮಾಡದು ಬಿಟ್ಟು ಯೆಂಡ ಕುಡಕಂಡು ಬಾಡು ತಿನ ಕಂಡಿದ್ದು ಬಿಡಿತೀನಿ ಅಂದ. ಆಗ ಆ ಸಬೇಲಿದ್ದ ಚಾಡಿಕೋರ ಚೆಳ್ಳಿಕ್ಯಾತ ನಾರಂದ ಮಹರ್ಶಿಗಳು ಅಂತಾರೆ—ಏನಯ್ಯಾ ಯಿಸ್ವಾಮಿತ್ರ ಕೇಳ್ದೋ ಸವಾಲ್ನ. ನೀನೇನು ಬಾಸೆ ಮಡಗತೀಯ ಮಡಗು ಅಂದ.

ಅದಕ ಯಿಸ್ವಾಮಿತ್ರಂದ—ಔನು ಸುಳ್ಳೇಳ್ದೆ ಅಂಗೆ ಇದ್ದರೆ, ನನ್ನ ತಪುಸ್ಸೆಲ್ಲ ಔನಿಗೇ ತರ್ಪಣಕೊಡತೀನಿ. ನನ್ನ ಗಡ್ಡ ಮೀಸೆ ಯೆಲ್ಲ ಬೋಳಿಶಿಬಿಟ್ಟು, ತಲೆ ಬಾಚಿಕೊಂಡು, ಸಾವಿರ ಜನ ಯೆಣ್ತೀರನ್ನ ಮಡೀಕೊಂಡು, ಮಕ್ಕಳೊಂದಿಗ ಆಗಿ ಬಿಡತೀನಿ ಹೋಗ್ ಅಂದುಬಿಟ್ಟ.

ಇಸ್ಟಾದ ಮೇಗೆ ಪಂಚಾಪ್ತಿ ಮುಗೀತು. ಅಲ್ಲಿಂದ ಕಸ್ಟಕೊಡಾಕೆ ಸುರು ಮಾಡಿದಯಿ ಸ್ವಾಮಿತ್ರ ಹರೀಶಚಿಂದ್ರಂಗೆ. ಅದೆಂಗಾಯ್ತುವಾ ಅಂತಂದ್ರೆ ಎರಡು ಕ್ವಾಣ ಕಾಲು ಕೆರಕೊಂಡು ಕುಸ್ತಿಗೆ ನಿಂತಕಂಡರೆ ಸಿಕ್ಕಿದ ನೊಪ್ಪುಸೆಪೆ ಯೆಲ್ಲ ಸಾಪಾಗೋ ವಂಗೆ ಯಿವರಿಬ್ಬರ ವೊಡದಾಟದಲ್ಲಿ ಹರೀಶಚಿಂದ್ರ ಚಯ ಬಂದಂಗೆ ಆಗೋಗಿಬಿಟ್ಟ.

—ವಿಧ್ಯಾರ್ಥಿ.

ಸುಬ್ಬಕೃಷ್ಣನ ಸಮಸ್ಯೆ

ಒಂದು ತರಹಾ ಅನುಮಾನ ಪ್ರಕೃತಿಯವ ನಮ್ಮ ಸುಬ್ಬುಕೃಷ್ಣ. ಒಂದೊಂದು ಅವನ ಸಂದೇಹಗಳೂ ನನ್ನನ್ನೂ ಅವನು ಹೇಳಿದ್ದೆ ಸರಿ ಇರಬಹುದೇ ಎಂಬ ಸಂದೇಹಕ್ಕೆ ಸಿಕ್ಕಿಸಿ ಪೇಚಾಡುವಂತೆ ಮಾಡುತ್ತವೆ. ಇಂಗ್ಲೀಷು ಕನ್ನಡ ಮಿಶ್ರಮಾಡಿ ಒಂದರಅರ್ಥ ಒಂದಕ್ಕೆ ಮಾಡಿಬಿಡುವ. ಈಗಲೂ ಮನಿಆರ್ಡರ್ ಫಾರಂ ಭರ್ತಿ ಮಾಡಬೇಕಾದರೆ ಏಳು ಗೋಳು --ಪೇಯಿ (Payee) ಎಂದಿರುವಕಡೆ ಸದಾ ತನ್ನ ಹೆಸರೇ ಬರೆಯುವ ರೆಮಿಟರಾಕಡೆ ಕಳಿಸಬೇಕಾದವರ ವಿಳಾಸ ಬರೆಯುತ್ತಿದ್ದ. ಪ್ರತಿಸಾರಿಯೂ ಇವನ ಹಣ ಇವನಿಗೂ ಹಣಕಳಿಸ ಬೇಕಾದವರಿಗೆ ರಸಿದಿಯೂ ತಪ್ಪದೆ ತಲುಪುತ್ತಿತ್ತು. "ನಿನ್ನ ಬುದ್ಧಿಗೆ ಬೆಂಕಿಬಿತ್ತು ಪೇಯೀ ಅಂದರೆ ನೀನು ಕಳಿಸಬೇಕಾದವರು ಕಣೋ ಮಂಕೇ" ಎಂದು ಬೈದಾಗ ಅವನ ಟೀಕೆ ವಿವರಣೆ ಪ್ರಾರಂಬಿಸಿಬಿಡುವ. "Pay ಅಂದರೆ ಕೊಡೂಂತತಾನೆ Pay ಯಿ ಅಂದರೆ ಕೊಡುವವನೂಂತ ಅಲ್ವೆ ಇಲ್ಲಿ ಕೊಡುವವನು ನಾನುತಾನೆ—ಅದಕ್ಕೆ ಪೇಯಿ ಅಂತ ಇರೋ ಕಡೆ ನನ್ನ ವಿಳಾಸ ಬರೆಯದೆ—ದಾನಿ—ಇದ್ದ ಹಾಗೆ. .." ಎಂದು ತಾನು ಬರೆದದ್ದೇ ಸರಿ ಪೋಸ್ಟಾಫೀಸಿನವರು ತಿಳಕೊಂಡಿರೋದು ತಪ್ಪು ಎಂದು ವಿವರಿಸುವ.

ಅವತ್ತು ಸಂಜೆ ಎರಡುಹನಿ ಉದುರಿಹವ ಬಹು ಹಿತವಾಗಿತ್ತು—ಮನೆ ಮುಂದಿನ ಕಾಂಪೋಡಿನಲ್ಲಿ ಹಾಯಾಗಿ ಆರಾಮ್ ಕುರ್ಚಿಲಿ ಒರಗಿದ್ದೆ—ಸರಸರನೆ ಏದುತ್ತಾಬಂದ ಕೈಲಿ ಒಂದು ಪೇಪರು ಹಿಡಿದುಕೊಂಡು. "ದೊಡ್ಡ ತಪ್ಪು ಇವರು ಮಾಡ್ತಾಯಿರೋದೂ" ಅಂದ. "ಯಾರದೋ ತಪ್ಪುವಿಷಯವೇನೋ" ಅಂದೆ. "ಗಾಂಧಿಬಕ್ತರು ಮಾಡಿರೋ ಕೆಲಸವೋ—ನಮ್ಮ ಮಂತ್ರಿಗಳು ಹಿರಿಯ ಕೌನ್ಸಿಲ್‌ಗೆ ನಾಮ ಕರಕಮಾಡಿರೋ ವಿಷಯವೋ—ಅನ್ಯಾಯ...." ಎಂದ.

"ನಿನ್ನ ಮನೆ ಕಾಯವಾಗ—ಅವರೇನೋ ಮಾಡಿದರು...."

"ಗಾಂಧಿಜಿಯವರ ಶಿಷ್ಯರೆಂದ ಮೇಲೆ ನಾನ್‌ವೈಲೆನ್ಸ್ ಕಡೆ ಗಮನ ಕೊಡಬೇಡವೇ—ಗಾಂಧೀಜಿ ಎಂಥ ನಾನ್‌ವೈಲಸಿಷ್ಟು—ಈ ಅವರ ಹೆಸರಿನಲ್ಲಿ ಪ್ರಜೆಗಳಿಗಾಗಿ ನಡೆಯೋ ಸರ್ಕಾರದ ಸೂತ್ರಧಾರಿಗಳು ಹಿರಿಯ ಕೌನ್ಸಿಲ್ ಸಭೆಗೆ ಚೌಡಯ್ಯನವರಂತ ವೈಲನಿಸ್ಟನ್ನ ನಾಮಕರಣ ಮಾಡಬಹುದೆ—ಇವರಿಗೆಯಾರೂ ನಾನ್‌ವೈಲ

ನಿಷ್ಟರೇ ಸಿಗಲಿಲ್ಲವೇ...." ಎಂದು ಹೇಳೇಬಿಟ್ಟ. ನನಗೆ ತಲೆ ತಿರುಗಿತು—ವಿಷಯ ತಳಕೆಳಗಾಯಿತು. ಒಂದು ನಿಮಿಷ ಏನೂ ತೋಚಲಿಲ್ಲ—ನನಗೂ ಸಂದೇಹ ಬರುವಂತೇ ಮಾಡಿಬಿಟ್ಟ ಮಹಾರಾಯ—ಒಂದು ಕ್ಷಣ ಅವ ಹೇಳಿದ್ದು ಸರಿ ಎಂದೆನಿಸಿತು—ಆಮೇಲೆ ಮತ್ತೆರಡು ಮಳೆಹನಿ ತಲೆಗೆಬಿದ್ದು ನೆತ್ತಿ ತಂಪಾದಮೇಲೆ—ವಿವರಿಸಿದೆ ಆ ಮಹಾ ಪುರುಷನಿಗೆ ಚೌಡಯ್ಯ ಎಂಥ ವೈಲನಿಷ್ಟರೆಂದು. ಕಡೆಗೂ ಅವನ ಬುರುಡೆಗೆ ವಿಷಯ ಇಳಿಯಲೇ ಇಲ್ಲ—ಗಾಂಧಿ ಭಕ್ತರು ಸರ್ವೈಲನಿಷ್ಟನ್ನು ನಾಮಕರಣ ಮಾಡಬೇಕಿತ್ತು ಎಂದು ತಲೆ ಕೆರೆದುಕೊಂಡು—ಸಂಶಯದಿಂದಲೇ ಹೊರಬಿದ್ದ. ಸಧ್ಯ ನನಗೆ ನೆಮ್ಮದಿಯಾಯಿತು.

—ಯಜ್ಞಪತು.

— o —



ತುಳಸಿಪೂಜೆ

ಮನೆ ಮುಂದೆ ತುಳಸಿಕಟ್ಟೆ!
ಕೈಲಿ ಯಿತ್ತಾಳೆ ತಟ್ಟೆ!
ಪಂಚ್ಪಾಳ ಊವ—ಅಣ್ಣು ಕರ್ಪೂರ!
ತಾನ ಮಾಡಿದ ತಲೆ—ತೊಟ್ಟಿಕ್ತ ನೀರ!
ಆರಿಷಿಣದ ಕೆನ್ನೆ—ಕುಂಕ್ಮ ಅಣೆನಲ್ಲಿ!
ಗಾಜುಬಳೆ ಗಲಿಗಲಿ! ಬತ್ತಂದ್ರೆ ಮಲ್ಲಿ—
ಕೊಳ್ಳ ಕರಿಮಣಿ, ಅದರ ನಡು ಚಿಕ್ಕ ಬಟ್ಟು!
ಬೈಸಾರಿ ಮುಕ ತೊಳಿದ ಕಣ್ಣಿಗೊಬ್ಬಟ್ಟು!

ಅಚ್ಚಿ ಅರಿಷಿಣ, ಇಕ್ಕಿ ಕುಂಕುಮ, ಮುಡಿಸಿ ಗೆಜ್ಜಸ್ತ್ರ,
ಊವನೊಪ್ಪಿಸಿ, ಅಚ್ಚಿ ಕರ್ಪೂರಗಳ ಸುಸೂತ್ರ,
ತೊಟ್ಟ ಚಿವುಟ ಎಲೆಗೆ ಅಣ್ಣಿಗೆ, ನೀರನೆರೆದೆತ್ತಿ,
ಮೂರು ಸಲ ವೈಯಡಗಿ ಬರುತಾಳೆ ಕಟ್ಟೆಯನು ಸುತ್ತಿ.

"ಬುದ್ದಿ ಕೊಡು ತುಲಸಿ
ಮನೆಯ ಗಂಡಸಿಗೆ;
ಯಿದ್ದೆ ಕೊಡು ಕಲಿಸಿ
ಮೂರು ಅಸುಗೂಸ್ಗೆ;
ನಂಗೆ—ಮಾತಾಯಿ—
ಕೊಡು ಮೊದಲು ಬಕ್ತಿ!
ಆಮೇಕೆ ಸಕ್ತಿ!
ಕಡೆಗೆ ಕೊಡು ಮುಕ್ತಿ!
ಕೊಟ್ಟು ನೀ ಕಾಯಿ!"

ಮಂಡಿಯೂರಿ, ನಡ ಬಗ್ಗಿಸಿ, ನೆಲಕೆ ಅಣೇನಿಕ್ಕೆ
ಏಳೋ ವೇಳೆ ಕಾದಿರತವೆ—ವೊಂಚಿದಂಗೆ ಅಕ್ಕಿ!
ಮೂರು ಕೂಡಿ ಪೂರ್ವಸುಕೃತ ಅಂತ ಗಂಡು ಯೆಣ್ಣು!
ನಗತ ನಗ್ತಾ ಕಿತ್ಕೋಂತವೆ ತಾಯಿ ಕೊಡೋ ಅಣ್ಣು!

ತುಳಸೀ ಪೂಜೆ ಮಲ್ಲೀಗನಕ
ಸೀ—ಸಿಗಿದಂಗೆ ಕಬ್ಬ!
ಮಕ್ಕಳಿಗನಕ ದಿನಬೆಳಗಾದ್ರೆ
ಅಣ್ಣು ಕಾಯಿನ್ ಅಬ್ಬ!
ಇವರ್ ಅಬ್ಬಾನೂ ಅವಳ್ ಕಬ್ಬೂನೂ
ತುಂಬೋಕ್ ನನ್‌ಕಣ್ ಡಬ್ಬ!
ತಗ್‌ಬೀಳ್ದಂಗ್ ಇಂಗೇನೆ ಬೆಳೀಲಿ
ಮೂವ್ರೋರ್ ಮನಸೀನ್ ದಿಬ್ಬ!

—ಸಾಗ.



"ನನ್ನ ಸ್ವಂತ ಪಿಕ್ಚರ್ನಲ್ಲಿ........ನಿಂಗೇ ಹೀರೋ ಪಾತ್ರ ಕೊಡ್ತೀನಯ್ಯ"

ಏನನ್ಯಾಯ !

ಅಲ್ಲಲ್ಲೇ ಹೊಗೆಸೊಪ್ಪು ಬೇಯಿಸುವುದಕ್ಕೆ ಎತ್ತರವಾದ ಗುಡಾಣಗಳ ಹಾಗಿರುವ ಕೊಠಡಿಗಳನ್ನು ಕಟ್ಟಿದ್ದಾರೆ. ನೀವು ನೋಡಿರಬಹುದು ಅಂತಹ ಮಾದರಿಯಲ್ಲೇ ನಮ್ಮ ಹಿತ್ತಲಲ್ಲಿ ಒಂದು ಹೊರಮನೆ ಇದೆ. ಮೊದಲು ನೋಡಿದಾಗ ಇದರಲ್ಲಿ ತೇರೇನಾದರೂ ನಿಲ್ಲಿಸುತ್ತಾರೋ ಎಂಬ ಅನುಮಾನ ಬಂತು ನನಗೆ. ನಂತರ ತಿಳಿಯಿತು, ಮನೆ ಮೊದಲಮಾಲೀಕ ಇಂಜನೀಯರಿಂಗ್ ಕಂಟ್ರಾಕ್ಟರ್. ಮಿಕ್ಕ ಸಿಕ್ಕ ಸಾಮಾನುಗಳಲ್ಲಿ ಆದಹಾಗೆ ಒಂದು ಹೊರಮನೆಕಟ್ಟಿಸಿದ. ಮಧ್ಯದಲ್ಲಿ ಅಟ್ಟಹಾಕಲು ಅನುಕೂಲವಾಗಿ ಈ ಮನೆ ಕಟ್ಟಿಸಿದ್ದ. ಅವನ ಕಾಲದಲ್ಲಿ ಅವನು ಕೂಡಿಟ್ಟ ಕಂಟ್ರಾಕ್ಟ್ ಸಾಮಾನುಗಳ ಗುದಾಮಾಗಿತ್ತು. ಅಂದಮೇಲೆ ಮೇಲ್ಪಾವಣೀಲಿ ಎರಡು ತ್ಯಾಗದ ತೊಲೆ, ಎರಡು ಕಬ್ಬಿಣದ ಪಟ್ಟಿ ಮೂರು ಯಾವುದೋ ನಮೂನೆಯ ರೀಪರು. ಇತ್ಯಾದಿ. ಅಲ್ಲಿ ಹಾವಿದೆ ಎಂದು ಯಾರೋ ಹೇಳಿದ್ದರ ಮೇಲೆ ನಾನು ಮನೆಗೆ ಬಂದಾಗಿನಿಂದ ಆ ಹೊರಮನೆ ಬಾಗಿಲು ತೆಗೆದು ಒಳಗೆ ಹೋಗಿತ್ತಿಲ್ಲ.

ಮೊನ್ನೆ ಮೊನ್ನೆ ಭಾರತದಲ್ಲಿ ಮಳೆಬರಲಿಲ್ಲ ಅಂತ ರಾಜಾಜಿ, ಸಂಸ್ಥಾನ ಸಭೆ, ಪುರೋಹಿತರು ಎಲ್ಲರೂ ಸೇರಿಕೊಂಡು ಪರ್ಜನ್ಯ ಜಪಮಾಡಿ, ಏಕ ಮನಸ್ಸಿನಿಂದ ದೇವರಿಗೆ ತೆಂಗಿನಕಾಯಿ ಲಂಚಕೊಟ್ಟರಲ್ಲಾ, ಅದರ ಪರಿಣಾಮವಾಗಿ ನಮ್ಮನೇ ಮೇಲೆ ಸಿಡುಲು ಗುಡುಗಿನ ಮಳೆ ಧಾರಾಕಾರವಾಗಿ ಬಿದ್ದುಹೋಯ್ತು. ನಮಗೆ ಹಗಲು ಕಂಡ ಹಾಗೇ ಒಂದು ಮರಿಸಿಡಿಲು ಆ ಹೊರಮನೆ ಮೇಲೆ ಹಾದುಹೋಯ್ತು. ಆದರಶಬ್ದಕ್ಕೆ ನಮ್ಮ ಅಜ್ಜನ ಕಾಲದ ಪೆಠಾರಿ ಒಂದು—ಎಂಟು ವರ್ಷಗಳಿಂದಲೂ ಆದರ ಚಿಲುಕ ಜಡಿಸಿ ಬಾಗಿಲು ಎತ್ತಲು ಆಗಿತ್ತಿಲ್ಲ—ಅದು ಬಾಯಿಬಿಚ್ಚಿ ತನ್ನಷ್ಟಕ್ಕೆ ತಾನೆ ತೆರೆದುಕೋಯ್ತು. ಅಂತಹ ಗುಡಿಗಿನ ಶಬ್ದ ನಮ್ಮ ಹಿತ್ತಿಲಲ್ಲೇ ಹೊಡೆಯಿತು.

ಇದು ಆದದ್ದು ಸುಮಾರು ಒಂದು ತಿಂಗಳ ಹಿಂದೆ. ಆದರೆ ಆ ಮರುದಿನದಿಂದ ಆ ಹೊರಮನೆಯಲ್ಲಿ ಸಾಯಂಕಾಲ ಆಯಿತು ಅಂದರೆ ಸೊಗಸಾದ ಸಂಗೀತ ಕೇಳಿಬರುಕ್ಕೆ ಅರಂಭವಾಯಿತು. ನಮ್ಮನೆಗಳಲ್ಲಿ ಹೊರಮನೆ ಮೂಲೇಲಿ ಸಂಗೀತ ಕೇಳಿಬಂದರೆ ನಮ್ಮನೆ ಹೆಂಗಸರು ಹೇಳೋದು ಗೊತ್ತೇ ಇದೆಯಲ್ಲಾ ! ಓಹೋ ಯಾವಳೋ ಒಬ್ಬ ನಾಯಕಸಾನಿ ಅಲ್ಲಿ ಖೂನಾಗಿದ್ದಳು. ಈಗ ಅವಳ ಪಿಶಾಚಿ ಅಲ್ಲಿ ಹಾಡುತ್ತೆ. ಅದಕ್ಕೇ ಅಲ್ಲಿ ಗೆಜ್ಜೆಶಬ್ದ ಸಂಗೀತ ಎಂದು ತೀರ್ಮಾನಿಸಿ, ಈ ಕ್ಷಣ ಮನೆಬಿಡಿ ಇಲ್ಲದೆ ಇದ್ದರೆ ತೌರುಮನೆಗೆ ಹೋಗುತ್ತೇನೆ ಎಂದು ಹಠಹಿಡಿದಳು.

ಮೂರುದಿನ ಆಯಿತು ಅವಳನ್ನೂ ಸಮಜಾಯಿಸುವುದಕ್ಕೆ. ನಾಯಕಸಾನಿ ಪಿಶಾಚಿ ಆದರೆ ಸಾಯಂಕಾಲ ಆರು ಗಂಟೆಗೆ ಸಂಗೀತ ಶುರುಮಾಡಿ ಮಧ್ಯೆ ಮಧ್ಯೆ ಭಾಷಣಮಾಡಿ, ಅದೂ ಅಲ್ಲದೆ ಈಗಿನ ಕವಿಗಳ ಸಿನಿಮಾ ಹಾಡು ಹೇಳಲು ಆಗುತ್ತ ದೆಯೇ? ಅದೇನು ಅಂತಹ ನವೀನ ಪಿಶಾಚಿಯೇ. ಇದೆಲ್ಲಾ ವೈಜ್ಞಾನಿಕ ಮರ್ಮ. ಮೊನ್ನೆ ಸಿಡಿಲು ಹೊಡೆದಾಗ ಈ ಹೊರ ಮನೆಯ ಮೇಲ್ಛಾವಣಿಯ ಕಬ್ಬಿಣದ ಪಟ್ಟಿ ಗಳು ಏನೋ ಆಯಸ್ಕಾಂತಕ್ಕೆ ಈಡಾಗಿದೆ. ಹಾಗಾಗಿ ಅಲ್ಲಿ ಆಕಾಶವಾಣಿಯ ಪ್ರೋಗ್ರಾಂ ಕೇಳಿಸ ಬರುತ್ತಿದೆ. ಇಲ್ಲದೆ ಇದ್ದರೆ, ನಾಯಕಸಾನಿಯ ಪಿಶಾಚಿಯೇ ಆಗಿದ್ದರೆ ಒಳ್ಳೊಳ್ಳೆ ಹಾಡು ಕೇಳಿ ಬರಬೇಕು. ಮುಸಲ ನಾಯಕಸಾನಿಯೇ ಈ ಹಾಡುಗಳನ್ನು ಈ ರೀತಿ ಹೇಳಿದ್ದರೆ, ಅವಳಿಗೆ ಮೂರು ಕಾಸು ಸಂಪಾದನೆಯೂ ಇಲ್ಲದೆ ಕಿಬ್ಬೊಟ್ಟೆಗೆ ಒದ್ದೆ ಬಟ್ಟೆ ಕಟ್ಟಿಕೊಂಡು ಇನ್ನು ಮೇಲೆ ಹಾಡು ಹೇಳುಲ್ಲ ಅಂತ ಶಪಥಮಾಡಿ ಉಪವಾಸ ಪ್ರಾಣಬಿಟ್ಟಿರೋಳು. ಇದಕ್ಕೆಲ್ಲಾ ಹೆದರಿ ಮನೆಬಿಟ್ಟರೆ ಬೇರೆ ಮನೆ ಎಲ್ಲಿ ಸಿಗುತ್ತೆ. ನಾವೇನು ಸರಕಾರದ ಆಫೀಸರುಗಳೇ ಇಲ್ಲಾ ತೆರಿಗೆ ಇಲಾಖೆಯ ನೌಕರರೇ? ಇಷ್ಟೆಲ್ಲಾ ವಾದಮಾಡಿ ಅವಳನ್ನು ಒಪ್ಪಿಸೋಹೊತ್ತಿಗೆ ತಿರುಗಿ ಹೊರಮನೆಯಿಂದ ಸಂಗೀತ ಶುರುವಾಯ್ತು. ನನ್ನ ಪುಣ್ಯಕ್ಕೆ ಸಂಗೀತದ ಮಧ್ಯೆ "ಇದು ಆಕಾಶವಾಣಿ ಕೃಪೆಯಿಂದ ಪ್ರಸಾರವಾಗುತ್ತಿದೆ" ಎಂಬ ಚುಟುಕಾ ಹೇಳಿಕೆ ನಮ್ಮೆಲ್ಲರಿಗೂ ಚೆನ್ನಾಗಿ ಕೇಳಿಸಿತು. ಆಗಲೇ ನನ್ನ ಹೆಂಡತಿಯ ಹೆದರಿಕೆ ಹೋಗಿ ಜಂಭಕ್ಕೆ ಶುರುವಾದದ್ದು—ಕೋಳಿಜಂಭ ಅಂತ ಜನ ಅಂತಾರೆ. ಆದರೆ ನನ್ನ ಹೆಂಡತಿ ಜಂಭಕ್ಕೆ ಶುರು ಮಾಡಿದರೆ, ಕೋಳಿ ಹುಂಜನ ಜತಗೆ ಸಹಗಮನ ಮಾಡಿಕೋಬೇಕು ಅಷ್ಟೆ.

ಮನೆಗೆ ಬಂದವರಲ್ಲಿ—ದೇವಸ್ಥಾನದಲ್ಲಿ ದೇವರಸೇವೆಗೆ ಬಂದವರಲ್ಲಿ, ಅರಿಶಿನ ಕುಂಕುಮ ಸಮಾರಂಭಗಳಲ್ಲಿ ಎಲ್ಲೆಲ್ಲೂ ನನ್ನ ಹೆಂಡತಿ ಏಕ ಚಕ್ರಾಧಿಪತ್ಯ ನಡೆಸಲು ಶುರು ಮಾಡಿದಳು ನಾಲ್ಕೇ ದಿನಗಳಲ್ಲಿ ಊರಿಗೆಲ್ಲಾ ಈ ಸಂಗತಿ ಟಾಂ ಟಾಂ ಹೊಡೆದಹಾಗೆ ಪ್ರಸಾರವಾಯಿತು.

ಕಡೆಗೆ ಒಂದು ರಾತ್ರಿ ಅವಳೇ ತನ್ನ ಹಿರಿಮೆಯ ಶಾಖದಲ್ಲಿ ತಾನೇ ಕೆಂಪೇರಿ ದ್ದಾಗ ಅಂದೇ ಬಿಟ್ಟಳು. ಈ ಮನೆಗೆ ಇನ್ನೂ ಐದು ರೂಪಾಯಿ ಬಾಡಿಗೆ ಹೆಚ್ಚು ಮಾಡಿದರೂ ಕೊಡೋಣ ಅಂದ್ರೆ ಇವತ್ತು ಸಾಯಂಕಾಲ ಹೊರಮನೆ ಸಂಗೀತ ಕೇಳುಕ್ಕೆ ಯಾರು ಬಂದಿದ್ರುಗೊತ್ತೆ. ದಿವಾನರ ಖಾಸಾ ಹೆಂಡತಿ. ನನ್ನ ಕೈಲೇ ಅರಿಶನ ಕುಂಕುಮ ಇಸುಕೊಂಡು ಹೋದರು. ಆಗ ಅವಳ ಮುಖದಲ್ಲಿ ಹೆಗ್ಗಣ ಹೊಡೆದ ಬೆಕ್ಕಿನಕಳೆ ಚೆನ್ನಾಗಿ ಕಾಣಬರುತ್ತಿತ್ತು. ಅದಕ್ಕೇ ಅಲ್ಲವೇ ಆಂಗ್ಲೇಯರು ಮಾನಿನಿಯರನ್ನು ಮಾರ್ಜಾಲಕ್ಕೆ ಉಪಮೆ ಕೊಡುತ್ತಾರೆ!

ಹೇಗೋ ಬಂದ ಪೀಡೆ ಈ ರೀತಿ ಪರ್ಯವಸಾನವಾದುದು ನನಗೂ ಹಿತಕರವಾಗಿತ್ತು. ಕಳೆದ ಎರಡು ವಾರಗಳಿಂದ ಚಿಲ್ಲರೆ ದುಡ್ಡು ಕೇಳುವುದನ್ನೇ ಬಿಟ್ಟಿದ್ದಾಳೆ ಅದಕ್ಕಿಂತ ಹೆಚ್ಚಾಗಿ ಅವರಣ್ಣ ಐನೂರು ಸಂಪಾದಿಸುತ್ತಾ ದೆಹಲಿಯಲ್ಲಿರುವ ವಿಷಯಾನೂ ಮಾತೇ ಆಡಲಿಲ್ಲ.

ಲೋಕದಲೆಲ್ಲಾ ಕ್ಷೇಮವೇ ಆಹುದು.

ಲೋಕೇಶನು ತಾನಾಕದಲಿಹನು. ಎಂದು ಪೂರ್ಣತೃಪ್ತಿಯಿಂದಿದ್ದೆ.

ಮರುದಿನ ಒಬ್ಬ ದೊಡ್ಡ ಮನುಷ್ಯರು ಕಛೇರಿಗೆ ಬಂದು ಈ ಸುದ್ದಿಯನ್ನೆತ್ತಿದರು. ಆಹುದು ಎಂದು ಒಪ್ಪಿಕೊಂಡೆ. ಸಾಯಂಕಾಲ ಬಂದು ಪರೀಕ್ಷಿಸಬಹುದೇ ಎಂದರು. ದಯಮಾಡಿ ಬನ್ನಿ ಎಂದು ಆಹ್ವಾನಿಸಿದೆ.

ಸಾಯಂಕಾಲ ಇನ್ನಿಬ್ಬರು ದೊಡ್ಡ ಮನುಷ್ಯರೊಡನೆ ಬಂದರು. ಎಲ್ಲವನ್ನೂ ಕೇಳಿದರು. ನಂತರ ಸಾವಧಾನವಾಗಿ ಜತೆಗಾರನ ಕೈಯಿಂದ ಒಂದು ಫಾರಂತೆಗೆದುಕೊಂಡು ಅದರಲ್ಲಿ ಸಹಿಹಾಕಿ ನನಗೆ ಕೊಡುತ್ತಾ ಹೇಳಿದರು ಸ್ವಾಮಿ! ಆಕಾಶವಾಣಿಯ ಪ್ರೋಗ್ರಾಂಗಳನ್ನೆಲ್ಲಾ ನೀವು ಯಾವುದೋ ಕಾರಣದಿಂದ ನಿಮ್ಮನೆಯಲ್ಲಿ ಕಳೆದ ಒಂದು ತಿಂಗಳಿಂದ ಕೇಳುತ್ತಿದ್ದೀರಿ. ಅದಕ್ಕೆ ವರ್ಷಕ್ಕೆ ೧೫ ರೂ. ರುಸುಂ ಕಟ್ಟಬೇಕು. ಅದನ್ನೂ ಕಟ್ಟಿಲ್ಲ. ಆದ್ದರಿಂದ ದಂಡ ಮೂವತ್ತು ರೂಪಾಯಿ ತೆರಬೇಕು. ಒಟ್ಟು ೪೫ ರೂಪಾಯಿಗೆ ನೋಟೀಸು ಜಾರಿ ಮಾಡಿದ್ದೇನೆ ಎಂದರು.

ಏನನ್ಯಾಯ! ಅಲ್ಲವೇ!

—ಕುಮಾರ್.



ನನ್ನ ಭಾಗ್ಯ

(ಶ್ರೀ|| ಹೋ. ಚಂ. ರವರ ಕ್ಷಮೇಬೇಡಿ)

ನಮ್ಮ ಮನೆ ಹುಡುಗರೆಲ್ಲ, ದೇವರದಯೆಯಿಂದ, ಈ ಸಲ ಪಾಸು! ಯಾವ ಜನ್ಮದ ಪುಣ್ಯಫಲವೊ, ಎಲ್ಲರೂ ಪಾಸಾದರು. ಮೊದಲನೆಯವನು ಬಿ. ಇ. ಫಸ್ಟ್ ಕ್ಲಾಸು. ಎರಡನೆಯವನು, ಆನರ್ಸ್ ಮುಗಿಸಿದ. ಮೂರನೆಯದು, ಅದೊಂದು ಹುಡುಗಿ, ಅದಕ್ಕೆ ಇ. ಸಿ. ಪಿ. ಎಸ್ಸು! ಇನ್ನೇನಾಗಬೇಕು ನನ್ನ ಭಾಗ್ಯಕ್ಕೆ ?

ಫಲಿತಾಂಶ ಹೊರಬಿದ್ದ ಒಂದೂವರೆ ಘಂಟೆಗೆ ಸರಿಯಾಗಿ, ಪ್ರಾರಂಭವಾಯಿತು ನನ್ನ ಶುಕ್ರದೆಶೆ—ಕನ್ಯಾಪಿತೃಗಳ ಕೃಪೆಯಿಂದ. ಅವತ್ತಿನಿಂದ ಇವತ್ತಿನವರೆಗೆ—ಸುಳ್ಳು ಎಳ್ಳಷ್ಟೂ ಇಲ್ಲ ಕಂಡಿರಾ!—ಒಂದು ದಿನವೂ, ಒಂದು ಘಳಿಗೆಯೂ ಬಿಡುವಿಲ್ಲ ನಮಗೆ. ಇಂಜನಿಯರ್ ಪುತ್ರಿ, ಡಾಕ್ಟರ್ ಕುವರಿ, ಲಾಯರ್ ಮಗಳು, ಸಿನಿಮಾ ಡೈರೆಕ್ಟರ್ ಸುತೆ, ಫುಡ್ ಆಫೀಸರ್ರ ಡಾಟರ್ರು, ಇತ್ಯಾದಿ ಇತ್ಯಾದಿ ಡಜನ್ ಗಟ್ಲೆ ಬಂದಿವೆ, ಇನ್ನೂ ಬರುತ್ತಿವೆ! ದೊಡ್ಡವನಿಗಾದರೂ ಸರಿ, ಚಿಕ್ಕವನಿಗಾದರೂ ಸರಿ, ಯಾರಿಗಾದರೂ ಅಂತೂ ಕೈಹಿಡಿದು ಕೃತಾರ್ಥರನ್ನಾಗಿ ಮಾಡಬೇಕು ಅಂತ ಗೋಗರಿಯುತ್ತಾರೆ!

ನಾವೂ ದಂಪತಿಗಳು (ಮೂವರು ಮಕ್ಕಳ ಸಹಿತ,) ಅವತ್ತಿನಿಂದ ಇವತ್ತಿನವರೆಗೂ, ಬೊಂಬಾಯಿ ಡೆಲ್ಲಿಯಿಂದ ಹಿಡಿದು ಬಾಗೇಪಲ್ಲಿವರೆಗೂ ಸುತ್ತುತ್ತಲೇ ಇದೇವೆ. ಪಾಪ, ಪುಣ್ಯಾತ್ಮರು ರೈಲು ಛಾರ್ಜು, ಬಸ್ ಫೇರು, ಜಟ್ಕಾ ಬಾಡ್ಗೆ, ಕೂಲಿ ಖರ್ಚು, ಕಡೆಗೆ ಪ್ಲೇನ್ ಪ್ರಯಾಣ ಸಹ ಮಾಡಿಸಿಬಿಟ್ಟರು, ಹೆಣ್ಣು ಹೆತ್ತ ಹಣೇ ಬರಹಕ್ಕೆ! ಹತ್ತಿರ ಹತ್ತಿರ ಎರಡು ತಿಂಗಳಾಯ್ತು ಮನೆಯಲ್ಲಿ ಒಲೇ ಹೊತ್ತಿಸಿ! ಭಾವೀ ಬೀಗಿತ್ತಿಯಾಗಿ ನಾನು ಸಂಪಾದಿಸಿರೋ ಖಣಗಳು ನಮ್ಮನೇ ಎರಡು ಮದುವೇಲಿ ಉಡುಗೊರೇ ಕೊಡಕ್ಕಾಗುತ್ತೆ!

ಈಗೀಗ ಯಾಕೋ ನಮಗೆ ಸುತ್ತೀ ಸುತ್ತೀ ಮೈನೋವಾಗುತ್ತಿದೆ. ನಿಲ್ಲಿಸೋಣವೇ ಪರ್ಯಾಟಣೆ ಯಾವುದಾದ್ರು ಒಂದನ್ನ ಗಂಟು ಹಾಕಿಕೊಂಡು ಅಂತ ಯೋಚನೆ ನಾವೇನೋ ಈಗ ಎರಡನೇವನ ಮದುವೆ ಮಾಡೋ ಅಭಿಪ್ರಾಯನೇ ಇಟ್ಕೊಂಡಿಲ್ಲಾನ್ನಿ. ಆದ್ರೂ, ಬಾಯಿಬಿಟ್ಟಿಲ್ಲ, ಪರ್ಯಾಟನೆ ಸಾಂಗವಾಗಿ ನಡೆದುಹೋಗಲಿ ಅವನಿಗೂ ಇದೇ ಸದವಕಾಶದಲ್ಲೇ ಅಂತ! "ನೆನ್ನೆ ತಾನೇ ನಮ್ಮ ಜೋತಿಷ್ಯರು

ಅವನ ಜಾತಕ ನೋಡಿ, ‘ ಅವನಿಗೆ ಈ ವರ್ಷ ಮದುವೆಯಾಗೋ ಹಾಗೇಇಲ್ಲ, ಗುರು ಬಲ ಶೂನ್ಯ, ಶನಿ ಪ್ರಾಮುಖ್ಯ ’ ಅಂತ ಹೇಳಿ ಬಿಟ್ಟರಲ್ಲಾ! ಎಂದು ಉದ್ವಿಗ್ನ ಮುಖ ಮಾಡಿಬಿಟ್ಟರೆ ಆಯ್ತುನ್ನಿ !

ಇನ್ನು ದೊಡ್ಡೋನಿಗೆ ಒಂದು ಮಾಡಿಕೋಬೇಕು, ಯಾವುದೂಂತ ನಿರ್ಧರಿಸ ಬೇಕಾಗಿದೆ. ಸಿನೀಮಾ ಡೈರೆಕ್ಟ್ರ ಹುಡುಗೀನ ಮಾಡಿಕೋಮ್ಮಾ, ಅಂತ ನಮ್ಮ ಎರಡನೇವನ ಒತ್ತಾಯ. ಬಿಟ್ಟೀ ಪಾಸುಗಳು ಸಿಕ್ಕುತ್ವೆ ಥಿಯೇಟರ್‌ಗಳಿಗೆಲ್ಲ ಅಂತ ಅವನಹೊಂಚು! ಈ ಊರಿನೋರೇ ಡೈರೆಕ್ಟರು. ಹುಡುಗೀನೂ ‘ಸಂಪಿಗೆನಾಸಿಕ, ಕೆಂಪನೆ ಬಣ್ಣ, ನೀಳವೇಣಿ. ಮೈತುಂಬ ಒಡವೆ. ಹೋಗಲಿ, ಹತ್ತಿರವಾಗಿದೆ. ಹುಡುಗೀಜೊತೆಗೆ ಹುಡುಗನೂ ತಿಂಗಳಿಗೆ ಇಪ್ಪತ್ತೈದು ದಿನ ಡೈರೆಕ್ಟರ್ ಭವನದಲ್ಲೇ ಉಳಕೊಳ್ಳಬಹುದು, ಅನುಕೂಲವಾಗುತ್ತೆ ಅಂತ ನಮ್ಮ ‘ ಇವರ’ನ್ನ ನಿಶ್ಚಯ ಮಾಡಿ ಕೊಂಡು ಬರಲೆಂದು ಕಳಿಸಿದೆ.

ಅರ್ಧಗಂಟೆಯಲ್ಲೇ ಜಟಕಾ ಬಾಗಿಲಲ್ಲಿ ಬಂದು ನಿಂತಿತು. ಇಬ್ಬರು ಹಿಡಿದು ತಂದು ಮಲಗಿಸಿದರು ‘ ಇವರ ’ನ್ನ ! ಸ್ಥಿಮಿತಕ್ಕೆ ಬಂದಮೇಲೆ ಕೇಳಿದೆ ವಿಷಯಾನ—ಮೇಕಪ್ ಇಲ್ಲದ ಹುಡುಗೀನ—ಕೃತಕದಂತ, ಪ್ಲಾಸ್ಟಿಕ್ ನಾಸಿಕ, ಬೊಂಬಾಯ್ ಚೌರಿ, ವೆಲ್ಡನ್ ಗೋಲ್ಡ್ ಒಡವೆ, ಬಣ್ಣ—ಬೆಳಕು, ರಹಿತವಾದ ಹುಡುಗೀನ ನೋಡಿ ಅಲ್ಲೇ ಮೂರ್ಛೆ ಹೋದರಂತೆ!

ಹೋಗಲಿ, ಫುಡ್ ಆಫೀಸರ ಮಗಳನ್ನೇ ಮಾಡಿಕೊಳ್ಳೋಣೇ ಅಂದು ಕೊಂಡೆ “ ಮೈಸೂರಲ್ಲಿ ರೇಷನ್ ವಜಾ; ಸಧ್ಯದಲ್ಲೇ ಮಿಕ್ಕಿತರ ಪಟ್ಟಣಗಳಲ್ಲೂ ಜಾರಿಗೆ ಬರುವುದು ! ” ಅಂತ ರೇಡಿಯೋ ಅರಚಿತು. ಇನ್ನುಮೇಲೆ ಫುಡ್ ಡಿಪಾರ್ಟ್‌ಮೆಂಟ್ ನಲ್ಲೇನೂ ತಿರುಳಿಲ್ಲ ಅಂತ ವಜಾ ಮಾಡಿಬಿಟ್ಟೆ.

ರೇಡಿಯೋ ಇಂಜನಿಯರ್ ಮನೇ ಹುಡುಗೀನ ತಂದುಕೋಮ್ಮ, ನಮ್ಮ ಥರ್ಡ್–ಹ್ಯಾಂಡ್ ರೇಡಿಯೋ ಕೆಟ್ಟು ಹೋದಾಗಲೆಲ್ಲ ಅತ್ತಿಗೇನೇ ರಿಪೇರಿಮಾಡಿ ಬಿಡುತ್ತಾಳೆ ಅಂದಳು ನನ್ನ ಮಗಳು. ಪೆದ್ದಮ್ಮ! ಆ ರೇಡಿಯೋ ಇಂಜನಿಯರಿಗೆ ಹನ್ನೊಂದು ಮಕ್ಕಳು, ಹನ್ನೆರಡನೇದರ ನಿರೀಕ್ಷೆ. ಏನು ಕೊಟ್ಟಾನು, ಏನು ಬಿಟ್ಟಾನು! ಡಾಕ್ಟರ್ ಡಾಟರ್‌ನೇ ಮನೆದುಂಬಿಸಿಕೊಳ್ಳೋಣವೇ ಅಂತ ‘ ಇವರ ’ ಹಲಬು. ಅವರಿಗೆ ನಿತ್ಯ ವಾತರೋಗ. ಕುಪ್ಪೀ ಮಾತ್ರೆಯಿಂದ ಹಿಡಿದು, ಕ್ರೂಷನ್ನು, ‘ ಮೈಸನ್ನು ’ ಎಲ್ಲಾ ಪ್ರಯೋಗವಾಗಿದೆ, ವಾಸಿಯಿಲ್ಲ. ಡಾಕ್ಟ್ರ ಬೀಗತನ ಮಾಡಿದರೆ ಬಿಟ್ಟೀ ಬಾಟ್ಲುಗಳು—ಸ್ಯಾಂಪಲ್ ಸೀಸೇ ಔಷಧಿಗಳೆಲ್ಲ ಸಿಕ್ಕುತ್ವೆ ಅಂತ ಅವರ ಚಪಲ! ಆದರೆ, ಆ ಹುಡುಗೀಗೆ ತೀರ ಬಾಲನರೆ—ಕಾಫೀಪುಡಿ ಸಕ್ಕರೆ ಮಿಶ್ರ ಕಂಡೂ ಕಂಡೂ ಆ ಕಂಬಳಿತಲೆಯನ್ನ ಹೇಗೆ ಕಟ್ಕೋದು ಹುಡುಗನಿಗೆ ?

ಕೊನೇಗೆ ಈಗ ನನ್ನ ಹಿರೀಮಗನೇ ನಿರ್ಧಾರ ಮಾಡಿಬಿಟ್ಟ. "ಯಾರೂ ಬೇಡಮ್ಮ, ಪೆಂಗಲ್‌ಪಲ್ಲಿ ಜಮೀನ್‌ದಾರ್ರ ಜಾತೆಯನ್ನೇ ಕೈ ಹಿಡೀತೀನಿ, ಖಂಡಿತ" ಅಂದ. "ಹುಡುಗಿ ಚೆನ್ನಾಗಿಲ್ಲಲ್ಲೋ, ಗಿಣೀಮೂಗು, ಹಳ್ಳೀಬಳ್ಳಿ, ಕಪ್ಪುಚರ್ಮ" ಅಂದೆ. "ಪರವಾಗಿಲ್ಲಮ್ಮಾ ಲೋಕಸಭೆ ಸದಸ್ಯ, ಲೋಕಲ್ ಸಮಿತಿಗಳೆಲ್ಲದರ ಅಧ್ಯಕ್ಷ, ಜಮೀನ್‌ದಾರೀ ಜೊತೆಗೆ. ಅದೂ ಅಲ್ಲದೆ—ನೀನೇ ಯೋಚಿಸಮ್ಮ. ಕೆಂಗಲ್‌ಗೂ ಚೆಂಗಲ್‌ಗೂ ಖುಲಾಯಿಸಿದ ಹಾಗೇ ಅದೃಷ್ಟ,....ಪೆಂಗಲ್‌ಗೂ....!"

'ಶಭಾಸ್!' ಅಂದೆ ಮಗನ್ನ. ನಿಜ, ಆ ಹೆಸರಿನಲ್ಲಿ ಯಕ್ಷಿಣಿಯಿದೆ, ಅನುಮಾನವೇ ಇಲ್ಲ! ಮುಖ್ಯ ಮಂತ್ರಿತ್ವ....ಕೇಂದ್ರ ಸರ್ಕಾರ....ಇತ್ಯಾದಿ ಇತ್ಯಾದಿ. ಆಗ ನನ್ನ ಮಗನೂ....!!


ಭಾದ್ರಪದ ಮಾಸದಲ್ಲಿ ಮದುವೆ. ಅಂದಹಾಗೇ ಇನ್ನೊಂದು ವಿಷಯ ಮರೆತಿದ್ದೆ. ನಾವು ನೋಡಿದ ಭಾವೀ ಬೀಗರಿಗೆಲ್ಲಾ ಒಂದು 'ಕಂಡಿಷನ್' ಹಾಕಿದ್ದೆ—ನಮ್ಮ ಎಸ್ಸೆಸ್ಸೆಲ್ಸಿ ಹುಡುಗೀಗೆ ಒಂದು ಗಂಡು ಒದಗಿಸಿ ಕೊಟ್ಟರೇ ಅವರ ಮನೆಯ ದನ್ನ ಮಾಡಿಕೊಳ್ಳೋದೂಂತ. ಅವಳೋ, ಬಲುಗಿಡ್ಡು, ಬಾಚಿಹಲ್ಲು—ಥೇಟು ಅವರ-ಅಪ್ಪನ ರೂಪವೇ ಹಾಳು! 'ಕಂಡಿಷನ್' ಹಾಕದಿದ್ದರೆ ಅವಳನ್ನ ಕಟ್ಟಿಕೊಳ್ಳೋರು ಯಾರು!

ಅದೇ ಹೇಳಿದೆನಲ್ಲ, ಭಾದ್ರಪದ ಮಾಸದಲ್ಲಿ ಮದುವೆ; ಹುಡುಗನದಾದ ಮೂರು ದಿನಕ್ಕೆ ಸಲ್ಲುವ ಶುಭ ಮಿಥುನ ಲಗ್ನದಲ್ಲೇ, ಅದೇ ಚಪ್ಪರದಲ್ಲೇ, ಅವರ ಖರ್ಚಿನಲ್ಲೇ, ನಮ್ಮ ಹುಡುಗೀನ ಅವರ ಮಗನಿಗೆ ಧಾರೆ ಎರೆಸಿ ಕೊಳ್ಳುತ್ತಾರೆ!

ಹೇಗಿದೆ ನನ್ನ ಭಾಗ್ಯ?

—ಸುನಂದಮ್ಮ

— 0 —



ಸುಲ್ತಾನನ ಕಾಲದಲ್ಲಿ

ಚಕ್ಕುಲಿ ಒರಳು ಇಸುಕೊಂಡು ಬರೋಣ ಅಂತ ಶಾರದಮ್ಮನ ಮನೆಗೆ ಹೋದೆ. ತಲೆಯೆಲ್ಲಾ ಬೆಳ್ಳಗಾದ ಮುಪ್ಪಿನ ಮುದುಕರೊಬ್ಬರು ಅವರ ಮನೆ ಜಗುಲಿ ಮೇಲೇ ಕೂತಿದ್ದರು. "ಶಾರದಮ್ಮನೋರು ಇದಾರೆಯೇ?" ಅಂತ ಅಂದು ಕೊಂಡೇ ಜಗುಲಿ ಹತ್ತಿದೆ. ಆ ಮುದುಕರಂದರು "ಯಾರಮ್ಮಾ ತಾಯಿ! ನೀನು! ಶಾರದಮ್ಮ ಅಡಿಗೆ ಮನೇಲಿ ಇದಾಳೆ. ಕರೀಲೇ" ಅಂದರು.

"ಬೇಡ, ಬೇಡ, ಅಲ್ಲಿಗೇ ಹೋಗಿ ಅವರನ್ನು ನೋಡ್ತೀನಿ. ಇಲ್ಲಿಂದ ಮೂರನೇ ಮನೇಲಿ ನಾನಿರೋದು" ಅಂದೆ.

"ಯಾರದು ಮೂರನೇ ಮನೆ" ಎಂದರು.

"ಹೇಗೆ ಹೇಳಲಿ, ತಲೆ ತಗ್ಗಿಸಿಕೊಂಡು ಮುಖ ಕೆಂಪಗೆ ಮಾಡಿಕೊಂಡು ಅವರ ಮನೆ ಹೊಸಲು ದಾಟಿ ಅಡಿಗೆ ಮನೆಗೆ ಓಡಿದೆ. ಶಾರದಕ್ಕ! ಶಾರದಕ್ಕ! ಯಾರೇ ಅದು ಮುದುಕರು ಜಗುಲಿ ಮೇಲೆ ಕೂತಿದ್ದಾರೆ, ಹೀಗೆಲ್ಲಾ ಅಂದರು. ಹೀಗೇಲ್ಲಾ ಕೇಳಿದರು. ನಾಲ್ಕು ಮಕ್ಕಳ ತಾಯಿ ಆದರೂ ಗಂಡನ ಹೆಸರು ಹೇಗೆ ಹೇಳೋದು ಬಲು ನಾಚಿಕೆ ಆಯ್ತಮ್ಮಾ" ಅಂದೆ.

"ಅಯ್ಯೋ! ಅವರು ನಮ್ಮ ದೊಡ್ಡ ಮಾವನೋರು ಕಣೆ. ರಂಗೂನ್, ಅಸ್ಸಾಂ, ಕಲ್ಕತ್ತಾ ಅಲ್ಲೆಲ್ಲಾ ಬೇಕಾದಷ್ಟು ಸುತ್ತಿದ್ದಾರೆ. ಇಷ್ಟು ದಿವಸಾನೂ ಕಾಶಿ ಯಲ್ಲೇ ಇದ್ದರು. ಕಡೆಗಾಲಕ್ಕೆ ಹುಟ್ಟಿದೂರು ನೋಡಬೇಕು ಅಂತ ಏನೋ ಆಸೆ ಯಾಯ್ತಂತೆ. ಅದಕ್ಕೇ ಇಲ್ಲಿಗೆ ಬಂದಿದ್ದಾರೆ. ಸ್ವಲ್ಪ ಹಣ ಕಾಸು ಇರೋ ಹಾಗಿದೆ. ನಮ್ಮ ಯಜಮಾನರು ಅವರನ್ನ ದೊಡ್ಡಪ್ಪಾ ಅಂತ ಬಲು ಪ್ರೀತಿಯಾಗಿ ಕಾಣ್ತಾರೆ. ಹಾಗೆಲ್ಲಾ ಇವರು ಮಾಡಬೇಕಾದರೆ ದಿಟವಾಗಲೂ ದುಡ್ಡಿದ್ದ ದೊಡ್ಡಪ್ಪ ಆಗಿರಬೇಕು? ಅದಕ್ಕೇ ನಾನೂ ಬಲು ಉಪಚಾರ ಮಾಡ್ತೇನೆ. ಆದರೂ ಅವರು ಎಳ್ಳಷ್ಟೂ ಕಷ್ಟಕೊಟ್ಟಿಲ್ಲ. ಇದು ಬೇಕು ಅದು ಬೇಕು ಅಂತ ಸತಾಯಿಸುವುದಿಲ್ಲ. ದಿನಾಲೂ ಹೊಳೆ ದಡಕ್ಕೆ ಹೋಗಿ ಅಲ್ಲಿ ಒಂದು ಗಂಟೆ ಇದ್ದು, ದೇವಸ್ಥಾನಕ್ಕೆ ಹೋಗಿ ಮನೆಗೆ ಬರ್ತಾರೆ. ಆಮೇಲೆ ಜಗುಲಿ ಬಿಟ್ಟು ಕದಲುವುದಿಲ್ಲ. ಬಂದವರ ಹತ್ತಿರ ಬಾಯ್ತುಂಬ ಮಾತಾಡ್ತಾರೆ. ಅವರು ಪ್ರಾಯವಾಗಿದ್ದ ಕಾಲದಲ್ಲಿ ಈ ಊರಲ್ಲಿ ನಡೆದಿದ್ದನ್ನೆಲ್ಲಾ ಬಣ್ಣ ಬಣ್ಣವಾಗಿ ಬಣ್ಣಿಸುತ್ತಾರೆ. ಕತೆ ಕೇಳುಕ್ಕೆ ಚೆನ್ನಾ.

ಯಾವ ಕತೆ ಹೇಳಲಿ, ಸುಲ್ತಾನನ ಕಾಲದಲ್ಲಿ ಈ ಹಳ್ಳಿಯಲ್ಲಿ ಆ ನಾಯಕ ಇದ್ದ. ಅವನ ಕುಮರಿ ಸವಾರಿ, ಸುಲ್ತಾನನ ಮೆಚ್ಚಿಗೆ, ಎಲ್ಲನನ್ನು ಹೇಳ್ತಾರೆ. ಸುಲ್ತಾನನ ಕಾಲದಲ್ಲಿ ಭಾವಿ ತೋಡೋದು, ಸುಲ್ತಾನನ ಕಾಲದಲ್ಲಿ ನದಿ ದಾಟೋದು, ಸುಲ್ತಾನನ ಕಾಲದಲ್ಲಿ ನವಿಲು ಕುಣಿಯೋ ಹಬ್ಬ, ಸುಲ್ತಾನನ ಕಾಲದಲ್ಲಿ ಮುತ್ತು ರತ್ನಾನ ಅಳತೆ ಸೇರಲ್ಲಿ ಮಾರುತ್ತ ಇದ್ದುದು ಎಲ್ಲವನ್ನು ಎಷ್ಟು ಚೆನ್ನಾಗಿ ಹೇತ್ತಾರೆ ಅಂತೀ" ಅಂದಳು.

"ಅವರಿಗೆ ಮಕ್ಕಳಿಲ್ಲವೇನೇ? ತಮ್ಮನ ಮಗನ ಮನೆಗೆ ಬಂದಿದ್ದಾರಲ್ಲಾ!" ಎಂದೆ.

"ಹದಿನೆಂಟು ವರ್ಷ ಆದಾಗಲೇ ಅವರಪ್ಪ ಹೇಳಿದ ಹುಡುಗಿ ಮದುವೆಯಾಗುಲ್ಲ ಅಂತ ದೇಶಾಂತರ ಹೊರಟು ಹೋದರಂತೆ. ಉತ್ತರ ಭಾರತದಲ್ಲೇ ಏನೋ ವ್ಯಾಪಾರ ಮಾಡಿದರಂತೆ, ಆಮೇಲೆ ರಂಗೂನಿಗೆ ಹೋಗಿ ಅಲ್ಲಿ ವಜ್ರದ ವ್ಯಾಪಾರ ಮಾಡಿದರಂತೆ. ಹಣ ಸೇರೋ ಹೊತ್ತಿಗೆ ವಯಸ್ಸಾಗಿಹೋಗಿತ್ತಂತೆ. ಇನ್ನೇಕೆ ಮದುವೆ ಅಂತ ಕಾಶೀಗೆ ಹೋಗಿ ವಿಶ್ವನಾಥನ ಸೇವೆ ಮಾಡ್ತಾ ಇದ್ದರಂತೆ. ಹುಟ್ಟಿದೂರು ಹಂಬಲ, ಹೇಮಾವತಿ ನೀರು ಕುಡೀಬೇಕು ಅಂತ ಆಸೆಯಾಯ್ತಂತೆ. ಹೇಗೂ ತಮ್ಮನ ಮಗ ಅಲ್ಲಿದ್ದಾನೆ ಅಲ್ಲಿ ಹೋಗೋಣ ಅಂತ ಬಂದರಂತೆ. ಇಲ್ಲೇ ಇರುತ್ತಾರಂತೆ" ಅಂದಳು ಶಾರದಕ್ಕ.

ಅಂದಹಾಗೆ ನಿಮ್ಮ ತಮ್ಮನ ಮದುವೆ ಚೆನ್ನಾಗಿ ಆಯಿತೆ ಎಂದು ಕೇಳಿದಳು.

ತಮ್ಮನ ಮದುವೆಯ ವೈಭವವನ್ನೆಲ್ಲಾ ವರ್ಣಿಸಿದೆ. ಆಗಲೇ ಚಕ್ಕುಲಿ ಹಿಟ್ಟಿನ ಜ್ಞಾಪಕ ಬಂದು, ಅಂದಹಾಗೇ ಚಕ್ಕುಲಿ ಒರಳು ಎರಡು ದಿನ ಕೊಟ್ಟಿರಮ್ಮಾ ಅಂದೆ.

ಅದನ್ನು ತೆಗೆದುಕೊಂಡು ಹೊರಗೆ ಬರುವಾಗ ಮುದುಕರು ನನ್ನ ಮತ್ತು ಚಕ್ಕುಲಿ ಒರಳನ್ನ ನೋಡಿ "ಏನು ತಾಯಿ ಇದಕ್ಕೋಸ್ಕರ ಬಂದಿದ್ದೆಯಾ! ಮುದುಕ ಅಂತ ನನಗೆ ಚಕ್ಕುಲಿ ಕೊಡೋದು ಮರೀಬೇಡ. ಕುಟ್ಟಾಣೀಲಿ ಹಾಕಿಕೊಂಡಾದರೂ ಕುಟ್ಟಿ ತಿನ್ನುತ್ತೀನೆ, ಸುಲ್ತಾನನ ಕಾಲದಲ್ಲಿ ಒಂದು ದಿವಸ ಹನ್ನೆರಡು ಬಾಗಿನದ ಚಕ್ಕುಲೀನ ಹಬ್ಬದ ಊಟ ಆದಮೇಲೆ ತಿಂದಿದ್ದೆ." ಎಂದರು.

"ಖಂಡಿತವಾಗಿ ಚಕ್ಕುಲೀನ ಮೆತ್ತಗೆ ಮಾಡಿ ತಂದುಕೊಡುತ್ತೀನೆ ಮಾವಯ್ಯಾ" ಅಂತ ಹೇಳಿ ಹೊರಬಿದ್ದೆ.

ಆಮೇಲೆ ಮೂರು ತಿಂಗಳಲ್ಲಿ ಮಾವಯ್ಯ ತುಂಬಾ ಪಳಕೆಯಾಯ್ತು. ಶಾರದಕ್ಕ ಹೇಳಿದ ಹಾಗೆ ಮಾವಯ್ಯನ ಆ ಸುಲ್ತಾನನ ಕಾಲದ ಕತೆ ಕೇಳುವುದಕ್ಕೆ ಬಲು ಚೆನ್ನಾಗಿರುತ್ತಿತ್ತು. ಮಾವಯ್ಯನಿಗೆ ನಾನು ಒಬ್ಬ ಮೊಮ್ಮಗಳಿದ್ದಹಾಗೇ ಇತ್ತು.

ಅಷ್ಟು ಸಲಿಗೆಮಾಡರು. ಆಗಿಂದಾಗ್ಗೆ ಏನಾದರೂ ಸಾಮಾನನ್ನು ಕೂಡ "ಇದನ್ನು ಇಟ್ಟುಕೋ ಮುಂದಕ್ಕೆ ಉಪಯೋಗ ಅಂತ" ಕೊಡುವುದಕ್ಕೂ ಶುರುಮಾಡಿದರು. ಇದನ್ನು ತೆಗೆದುಕೊಂಡು ಅವರಿಗೆ ಕಾಣದಹಾಗೆ ಶಾರದಕ್ಕನಿಗೆ ಹಿಂದಕ್ಕೆ ಕೊಡೋದೇ ಮಹಾ ಪ್ರಯಾಸವಾಗುತ್ತಿತ್ತು ನನಗೆ.

ಭೀಮನ ಅಮಾವಾಸ್ಯೆ. ಸಾಯಂಕಾಲ ಶಾರದಕ್ಕನ ಮನೆಗೆ ಹೋದಾಗ ಜಗುಲಿಮೇಲೆ ಮಾವಯ್ಯ ಇಲ್ಲ. ಯಾಕೋ ಎಂದುಕೊಂಡು ಹಜಾರಕ್ಕೆ ಹೋದರೆ ಅಲ್ಲಿ ಮಾವಯ್ಯ ಕೂತಿದ್ದಾರೆ, ಏನೋ ಯೋಚನೆ ಮಾಡ್ತಾ. ಶಾರದಕ್ಕ ಅರಳು ಆರಿಸುತ್ತಾ ಕೂತಿದ್ದಾಳೆ. ನಾನು ಅಲ್ಲಿ ಕೂತು "ಏನು ಮಾವಯ್ಯಾ! ಒಳಗೆ ಕೂತಿದ್ದೀರಿ ಇವತ್ತು" ಎಂದೆ.

"ಹೇಳಿದ್ದನ್ನೆಲ್ಲಾ ಪಾರಣವಾಗಿ ಕಿವಿಗೊಟ್ಟು ಅವಳು ಕೇಳುತ್ತಿದ್ದಳು" ಎಂದು ಕನವರಿಸಿಕೊಂಡಹಾಗೆ ಅಂದರು ಮಾವಯ್ಯಾ!

ಓಹೋ! ಇವತ್ತು ಮಾವಯ್ಯ ಹೇಳುವ ಕಥೆ ಖಚಿತ ಸ್ವಾರಸ್ಯವಾಗಿರುತ್ತೆ. ಆತ್ಮ ಕತೆಯ ಒಂದು ಪುಟ ಇರಬಹುದು ಅಂದುಕೊಂಡು.

"ಅವಳು ಅಂದರೆ ಯಾರು ಮಾವಯ್ಯಾ!" ಎಂದು ಉತ್ತೇಜನ ಕೊಟ್ಟೆ.

ಮಾವಯ್ಯ ನನ್ನ ಕಡೆ ದೃಷ್ಟಿಸಿನೋಡಿದರು. ನಾನೂ ಅವರನ್ನೇ ನೋಡಿದೆ. ಎಂಭತ್ತಕ್ಕೆ ಒಂದು ದಿನವೂ ಕಡಿಮೆ ಇರಲಾರದು ಅವರಿಗೆ. ಆದರೂ ನೆರಿಗೂಡಿದ ಆ ಮುಖಕ್ಕೂ ಒಂದು ಕಾಂತಿ ಇತ್ತು. ಮಾವಯ್ಯ ಹೇಳಿದರು, "ಇವತ್ತು ಭೀಮನ ಅಮಾವಾಸ್ಯೆ ಅಲ್ಲವೇನೆ? ಗಂಡನ ಪೂಜೆ ಮಾಡಿ ಬಂದ್ಯಾ" ಎಂದರು.

"ಗಂಡ ಸರ್ಕೀಟಿಗೆ ಹೋಗಿದ್ದಾರೆ" ಅಂದೆ.

"ಅಯ್ಯೋ! ಇವತ್ತು ಯಾಕೆ ಸರ್ಕೀಟಿಗೆ ಹೋದಾ! ಅಂದಮೇಲೆ ಹಬ್ಬದ ಅಡಿಗೆ ಇಲ್ಲ ಮನೇಲಿ. ಶಾರದಾ! ಎರಡು ಸಕ್ಕರೆ ಒಬ್ಬಟ್ಟು ತಂದುಕೊಡು. ಇಲ್ಲಾದರೂ ಬಾಯಿ ಸಿಹಿ ಮಾಡಿಕೊಳ್ಳಲಿ" ಎಂದರು ಮಾವಯ್ಯ.

ಈ ಗಲಾಟೇಲಿ ಆತ್ಮ ಕತೆಯು ಮಾಯವಾಗಬಹುದು ಅಂತ ನಾನು ತಿರುಗಿ ಕೇಳಿದೆ. "ಹೇಳಿದ್ದನ್ನೆಲ್ಲಾ ಪಾರಣವಾಗಿ ಕೇಳುತ್ತಿದ್ದಳು ಅಂದರಲ್ಲಾ ಮಾವಯ್ಯಾ! ಯಾರದು ? ಸುಲ್ತಾನನ ಕಾಲದವಳೇ?" ಎಂದೆ.

"ಅವಳೇ! ಹೌದು ಹೌದು ಸುಲ್ತಾನನ ಕಾಲದಲ್ಲಿ ಅರೇಬಿಯಾದಿಂದ ಒಬ್ಬ ನರ್ತಕಿ ಬಂದಿದ್ದಳು. ಸುಲ್ತಾನನ ದರ್ಬಾರಿನಲ್ಲಿ ನಾಚು ಕಟ್ಟಿದಳು. ಇವತ್ತಿಗೂ

ಅವಳ ಕಾಲ್ಗೆಜ್ಜೆಯ ಧಿನ, ಧಿನ, ನನ್ನ ಎದೆ ಹೊಡೆತಕ್ಕೆ ಸರಿಯಾಗಿ ಕೇಳಿಸುತ್ತಾ ಇದೆ. ಸ್ಫುರದ್ರೂಪಿ ಅವಳು. ರವಿವರ್ಮನ ರಂಭೆಯಂತೆ ತುಂಬಿಕೊಂಡಿದ್ದಳು. ಮಾರನೆ ದಿನ ಹೇಮಾವತಿ ತೀರದಲ್ಲಿ ಮರಳ ಮೇಲೆ ಕೂತಿದ್ದೆ. ಹಿಂದಿನ ದಿನದ 'ನಾಚ' ನ್ನೇ ಜ್ಞಾಪಿಸಿಕೊಂಡು. ಹಿಂದೆ ಸರಸರ ಎಂತ ಶಬ್ದ ಆಯಿತು. ನಾಗರ ಹಾವೋ ಎಂದು ಹಿಂತಿರುಗಿದೆ. ನಾಗರಹಾವಲ್ಲಾ! ನಾಗವೇಣಿ ಸರಿಗೆ ಸೀರೆ ಸರ ಸರ ಅಂತ ಶಬ್ದ ಮಾಡಿತ್ತು. ಯಾರು ಗೊತ್ತೇ ಆ ನಾಗವೇಣಿ ಅವಳೇ ಅರೇಬಿ ನರ್ತಕಿ. ಸಂಜೆ ಗಾಳಿ ಸಂಚಾರಕ್ಕೆಂದು ಯಾರಿಗೂ ತಿಳಿಯದಹಾಗೆ ಹಿಂದೂ ಸ್ತ್ರೀ ಉಡುಪು ಧರಿಸಿ ನದೀ ತೀರದಲ್ಲಿ ಗಾಳಿ ಸಂಚಾರಕ್ಕೆ ಬಂದಿದ್ದಳು. ನನ್ನನ್ನು ನೋಡಿ ವಂದಿಸಿ ಆ ಮಾತು ಈ ಮಾತು ಆಡಿ ಊರ ಸಮಾಚಾರವನ್ನೆಲ್ಲಾ ಕೇಳಿದಳು. ಕಡೆಗೆ ನನ್ನ ಸಮಾಚಾರವನ್ನೆಲ್ಲಾ ಕೇಳಿದಳು. ನಿಮಗೆ ಮದುವೆಯಾಗಿಲ್ಲ ಅಂತೀರಿ. ನನಗೂ ಆಗಿಲ್ಲ. ನನ್ನ ಮದುವೆ ಯಾಗ್ತೀರಾ ಅಂದಳು. ಇದನ್ನು ಕೇಳಬೇಕೇ? ಇವತ್ತೇ ಸಿದ್ಧ ಎಂದೆ. ಇವತ್ತು ಬೇಡ. ನಾಳೆ ಸಾಯಂಕಾಲಕ್ಕೆ ಇಲ್ಲಿಗೆ ಬರುತ್ತೇನೆ. ಆಗ ಇಬ್ಬರೂ,ಬೇರೆ ಊರಿಗೆ ಹೋಗಿ ಮದುವೆಯಾಗಿ ಸುಖವಾಗಿರೋಣ ಎಂದಳು. 'ನೀನು ಬರುತ್ತಿಯೋ ಇಲ್ಲವೊ' ಎಂದೆ. ತನ್ನ ಬಲಗೈಲಿದ್ದ ಒಂದು ವಜ್ರದ ಬಳೆ ತೆಗೆದು ನನ್ನ ಕೈಲಿಟ್ಟಳು. 'ಇದೇ ಸಾಕ್ಷಿ! ಇದಕ್ಕಾಗಿಯಾದರೂ ಬಂದೇ ಬರುತ್ತೇನೆ ಎಂದು ಹೇಳಿ ಹೇಮಾವತಿಯ ಸುಳಿಯ ಸಪ್ಪಳಕ್ಕೆ ಸರಿಯಾಗಿ ಕಾಲು ತಾಳ ಹಾಕುತ್ತಾ ಹೊರಟು ಹೋದಳು.

ಮಾರನೇ ಸಂಜೆ ಹೇಮಾವತಿ ತೀರದಲ್ಲಿ ರಾತ್ರಿ ಹತ್ತು ಗಂಟೆತನಕ ಕಾದೆ. ಯಾರೂ ಬರಲೇ ಇಲ್ಲ. ಇವತ್ತಿನತನಕ ಯಾರೂ ಬರಲೇ ಇಲ್ಲ. ಆ ಬಳೆ ಇನ್ನೂ ನನ್ನ ಹತ್ತಿರವೇ ಇದೆ. ತೆಗೆದುಕೋ. ಶಾರದೇಗೆ ಹೇಳಬೇಡ ಅಂತ ಒಂದು ಬಳೆ ಮಾವಯ್ಯ ನನ್ನ ಕೈಲಿಟ್ಟರು. ಬೇಗ ಮಡಿಲಿಗೆ ಸೇರಿಸಿದೆ.

ಅಷ್ಟುಹೊತ್ತಿಗೆ ಶಾರದಕ್ಕ ಒಳಗಿನಿಂದ ಎರಡು ಸಕ್ಕರೆ ಹೋಳಿಗೆ ತಂದು ಕೊಟ್ಟರು. ಅದನ್ನೂ ತಿಂದು ಕುಂಕುಮ ಇಟ್ಟುಕೊಂಡು ಮನೆಗೆ ಬಂದೆ.

ಮಡಿಲಿನಿಂದ ಬಳೆಯನ್ನು ತೆಗೆದು ನಿಲುವಗೌರಿಗೆ ತೊಡಿಸಿದೆ. ಹದಿನೈದು ದಿನದ ಹಿಂದೆ, ನಿಲುವಗೌರಿಗೆ ಹಾಕಿದ್ದ ಮಣಿಬಳೆಯಲ್ಲೊಂದು ಶಾರದಕ್ಕನ ಮನೆ ಯಲ್ಲಿ ಮರೆತಿದ್ದೆ ಅನ್ನೋದು ಆಗಲೇ ಜ್ಞಾಪಕಕ್ಕೆ ಬಂದದ್ದು.

—ಶ್ರೀಮತಿ ಸುಜಲ.

★

ಸಿನಿಮಾಗಳಲ್ಲಿ ಸಂಚಾರ ಸೌಕರ್ಯ

ಮೊನ್ನೆ ಶಿವಮೊಗ್ಗಾದಿಂದ ಮೈಸೂರಿಗೆ ಸಕುಟುಂಬ ಸಪರಿವಾರ ಪ್ರಯಾಣ ಹೊರಟಿದ್ದೆ. ರಾತ್ರಿ ಹೊತ್ತು ಬೀರೂರಿನಲ್ಲಿ ಗಾಡಿ ಬದಲಾಯಿಸುವ ಗೋಳನ್ನು ಅನುಭವಿಸಿದ್ದಾಯಿತು. ಮುಂದಿನಗಾಡಿಯಲ್ಲಿ ಕುಳಿತು ಕೊಂಚ ಸಾವರಿಸಿಕೊಂಡಿದ್ದಾಯಿತು. ಪಕ್ಕದಲ್ಲಿದ್ದವರೊಬ್ಬರೊಡನೆ ಮಾತನಾಡಿ ನಾಲಗೆ ಕೆರೆತ ತೀರಿಸಿಕೊಂಡಿದ್ದಾಯಿತು. ಅವರ ಕೈಯಲ್ಲಿ ಪ್ರೀಸ್ಟ್ಲಿ ಬರೆದ ಪುಸ್ತಕವೊಂದಿತ್ತು. ಅದನ್ನು ತೆಗೆದುಕೊಂಡು ಪುಟ ತಿರುವಿದೆ. ಒಂದು ಪ್ರಬಂಧವು ಮನಸ್ಸಿಗೆ ತುಂಬ ಹಿಡಿಯಿತು. ಅದು ಸಿನಿಮಾಗಳಲ್ಲಿರುವ ಸಂಚಾರ ಸೌಕರ್ಯದ ವಿಚಾರ. ಬರಹಗಾರ ಹೇಳಿದ ಒಂದೊಂದು ಮಾತೂ ನನಗೆ ನಿಜ ನಿಜ ಅನ್ನಿಸಿತು.

ಯಾರಾದರೂ ಗ್ರಹಿಸಿದಾರೋ ಇಲ್ಲವೋ—ಈ ಸಿನಿಮಾಗಳ ಕಾಲ್ಪನಿಕ ಪ್ರಪಂಚದಲ್ಲಿ ತುಂಬ ಸಂತೋಷವನ್ನುಂಟು ಮಾಡುವುದೆಂದರೆ ಅದರಲ್ಲಿನ ಪ್ರಯಾಣದ ರೀತಿ—ನಾವು ವಾಸ್ತವ ಪ್ರಪಂಚದಲ್ಲಿ ಅನುಭವಿಸುವ ಅವಸ್ಥೆಗಿಂತ ತೀರ ಭಿನ್ನವಾದ ರೀತಿ. ತಾರೆಯರ ಮುಖಾರವಿಂದಗಳಿಗಿಂತಲೂ, ಅವರ ಬೆಡಗು ಬಿನ್ನಾಣಗಳಿಗಿಂತಲೂ, ಅವರ ಮೈಕಟ್ಟಿನ ಚೆಲುವಿಕೆಗಿಂತಲೂ ಸಿನಿಮಾಗಳಲ್ಲಿನ ಸಂಚಾರ ಸೌಕರ್ಯವೇ ಹೆಚ್ಚು ಆಕರ್ಷಣವೆನಿಸುತ್ತದೆ. ಸಿನಿಮಾ ಲೋಕದಲ್ಲಿ ಪ್ರಯಾಣವೆಂದರೆ ಎಷ್ಟು ಸರಾಗ! ಅಲ್ಲಿನ ಕಾಲನಿಷ್ಠೆ ಯಾವರೂ ಎಂಥದು! ಎಷ್ಟು ತ್ವರೆಯಿಂದ ಪ್ರಯಾಣ ಸಾಗುತ್ತದೆ! ಅದರಲ್ಲೂ ಎಷ್ಟೊಂದು ನಿರಾಯಾಸವಾಗಿ! ಆದರೆ ನಮ್ಮ ಜಡ ಪ್ರಪಂಚದಲ್ಲಿ ಹಾಗೆಯೆ? ಇಲ್ಲಿ ಬಹಳ ಕಷ್ಟದಿಂದ ಪರದಾಡಬೇಕಾಗಿದೆ. ಇಲ್ಲಿ ಸರಕುಗಳೆಲ್ಲ ಹೆಣಭಾರ ಕೂಲಿಗಳೆಲ್ಲ ಠೊಣಹಸ್ದುಗಳು—ಶುದ್ಧ ಪೀಡಕರು ಸೀಟಿನ ಮೇಲೆ ಅಡ್ಡಡ್ಡಲಾಗಿ ಮಲಗಿ ಗೊರಕೆಹೊಡೆವ ಧಾಂಡಿಗರಿಂದಾಗಿ ರೈಲಿನಲ್ಲಿ ಕೂರಲು ಸ್ಥಳವಿಲ್ಲ. ಸಾಮಾನುಗಳೆಲ್ಲ ಚೆಲ್ಲಾಪಿಲ್ಲಿ. ಜಟಕಾವಾಲರ ಹಿಂಸೆ ಅಸಹನೀಯ. ಕಾರುಗಳಿದ್ದರೂ ಸುಖವಿಲ್ಲ. ಅವುಗಳು ಹೊರಡದೆ ದುರಾಗ್ರಹ ತೋರಿಸುತ್ತವೆ. ಹೊರಟರೂ ಬುಸಿಗುಟ್ಟಿಕೊಂಡು ಸಾಗುತ್ತವೆ. ಟ್ಯಾಕ್ಸಿಗಳ ವರ್ತನೆಯೂ ಅಷ್ಟೆ. ರೈಲು ಬಸ್ಸುಗಳಿಗೆ ವೇಳಾ ನಿಯಮಗಳ ಅಂಕೆ ಆತಂಕವಿಲ್ಲ. ಇನ್ನು ಹಡಗು ಪ್ರಯಾಣವಾದರೂ ಹಾಗೆಯೇ....ಪೈಂಟಿನ ನಾತ, ಇತರ ದುರ್ವಾಸನೆ, ಸಾಲದಕ್ಕೆ ಹಡಗಿನ ವಾಲಾಟ ಓಲಾಟ....ಇವು ವಾಕರಿಕೆ ತರಿಸುತ್ತವೆ. ವಿಮಾನ ಪ್ರಯಾಣ

ವೆಂದರೆ ಯಾಕೋ ಎದೆಯಲ್ಲಿ ಗಡಗಡ. ಅದರಲ್ಲಿಯೂ ಅವು ಸುತ್ತಿ ಸುತ್ತಿ ಕೆಳಗಿಳಿಯುವಾಗಂತೂ ರಾಮ ರಾಮ....! ನನ್ನಂತೆ ಸಾಮಾನುಗಳ ರಾಶಿ ಬಲವಾಗಿದ್ದರಂತೂ ರೈಲಿನಲ್ಲಿ ಗೋಳೇ ಗೋಳು. ಒಂದು ಪುಟ್ಟದಾದ ಹೋಲ್ಡಾಲು, ಎರಡು ಮರಿ ಬೆಡ್ಡಿಂಗಗಳು, ಮೂರು ಟ್ರಂಕುಗಳು, ಇನ್ನು ರೈಲು ಚೊಂಬು, ಥರ್ಮಾಸ್ ಫ್ಲಾಸ್ಕು, ಛತ್ರಿ, ಕ್ಯಾಮರ, ಕೈ ಕೂಸು (ತಾಯಂದಿರು ಕ್ಷಮಿಸಬೇಕು) ಹೀಗೆ ಹಲವಾರು ಸಾಮಾನುಗಳು ಜೊತೆಗಿದ್ದುಬಿಟ್ಟರೆ, ಪ್ರಯಾಣದ ಗುರಿ ಸೇರುವ ಹೊತ್ತಿಗೆ ಆಸಾಮಿ ಹಣ್ಣುಗಾಯಿ ನೀರುಗಾಯಿಯಾಗಿರುತ್ತಾನೆ.

ಆತನಿಗೆ ಜೀವನದಲ್ಲಿ ವೈರಾಗ್ಯವುಂಟಾದರೂ ಆಗಬಹುದು. ಇದೆಲ್ಲ ನಮ್ಮ ಜಡ ಪ್ರಪಂಚದ ಸಮಾಚಾರ.

ಸಿನಿಮಾಗಳ ಮಾಯಾ ಪ್ರಪಂಚದಲ್ಲಾದರೋ ಸುಂದರ ರಾವಣನೊಬ್ಬನು ಬಂದು ಬಾಗಿಲು ತೆರೆದು ಸೀಟಿನ ಮೇಲೆ ಸ್ಥಾಪಿತವಾಗುವುದೇ ತಡ ಕಾರು ಭುರ್ರೆಂದು ಸರಿದು ಹೋಗುತ್ತದೆ. ಟ್ಯಾಕ್ಸಿಯೊಂದು ಎತ್ತಣಿಂದಲೋ ಬಂದು ' ಗರಕ್ ' ಎಂದು ಕಾಲ ಬುಡದಲ್ಲೇ ನಿಲ್ಲುತ್ತದೆ. ಇನ್ನು ಅವುಗಳು ಜಾರಿಕೊಂಡು ಹೋಗುತ್ತವೋ ಎಂಬಂತೆ ಸುಯ್ಯನೆ ಸರಿದು ಹೋಗುವ ವೈಭವವಾದರೂ ಎಂಥದು! ರೆಪ್ಪೆ ಬಡಿಯುವುದರೊಳಗೆ ರೈಲೊಂದು ಬರುತ್ತದೆ ಹೊರಟುಹೋಗುತ್ತದೆ. ನಟಸಾರ್ವಭೌಮ ವಿಮಾನ ನಿಲುದಾಣದಲ್ಲಿ ಕಾಲಿಟ್ಟನೆಂದರೆ ಬಂತೇ ಬಂತು....ಏಣಿ ಇಳಿಬಿಟ್ಟಿತು.... ಆತ ಒಳಕ್ಕೆ ತೂರಿಕೊಂಡ....ಹೊರಟೇ ಹೋಯಿತು ವಿಮಾನ! ಹೀಗೆ ಸಿನಿಮಾಗಳಲ್ಲಿ ವಾಹನಗಳದು ಎಂಥ ಸುವ್ಯವಸ್ಥೆ! ಅಲ್ಲಿ ಕೂಲಿಗಳು ಎಷ್ಟೊಂದು ನಮ್ರತೆಯುಳ್ಳವರು! ಟಾಂಗಾವಾಲರೆಲ್ಲ ಸಂಗೀತ ಪಟುಗಳು, ಮಹಾ ರಸಿಕರು....ಜಗಳ ಕಾಯುವವರಲ್ಲ.

ಇನ್ನು ಸಿನಿಮಾ ಲೋಕದಲ್ಲಿ ಮಾಯಾಜಾಲ ಬೇರೆ ಇದೆ. ಆಗ ವಾಹನಗಳ ಹಂಗೇ ಇಲ್ಲ. ಒಂದು ಚಿಟಿಕೆ ಬೂದಿಹಾರಿಸಿದರೆ, ಮಂತ್ರದ ಕೋಲನ್ನು ಮೇಲೆತ್ತಿದ್ದರೆ ಬೇಕು ಬೇಕಾದ್ದು. ಎಲ್ಲಿಗೆ ಬೇಕೋ ಅಲ್ಲಿಗೆ ಪುಸಕ್ಕನೆ ನೆಗೆದು ಬಿಡುತ್ತವೆ ; ನಾಲ್ವರು ಅಪ್ಸರೆಯರು ಬಂದು ರಾಜಪುತ್ರನ ಮುಂದೆ ನಿಲ್ಲುತ್ತಾರೆ; ಹತ್ತು ಮಂದಿ ಮಲ್ಲರು ಪ್ರತ್ಯಕ್ಷರಾಗಿ ರಾಜಪುತ್ರಿಯನ್ನು ಎಲ್ಲಿಗೋ ಸಾಗಿಸಿಬಿಡುತ್ತಾರೆ. ಎಲ್ಲ ಮಾಯೆ, ಮಂತ್ರ! ವಾಹನಗಳು ಬೇಕಿಲ್ಲ ಕೂಲಿಗಳು ಬೇಕಿಲ್ಲ.

ದೀರ್ಘ ಪ್ರಯಾಣವಾದರೆ ಅದು ಮುಗಿಯುವ ಹೊತ್ತಿಗೆ ನನ್ನಂಥ ಸಾಮಾನ್ಯರು, ಅತಿತ್ರಾಣಿಗಳು ಕಂಗಾಲಾಗಿರುತ್ತಾರೆ. ಚೇತರಿಸಿಕೊಳ್ಳಲು ಕೆಲವು ಗಂಟೆಗಳಾದರೂ ಬೇಕು. ದಿನಗಳೇ ಬೇಕಾಗಲೂ ಬಹುದು. ಸಿನಿಮಾಗಳಲ್ಲಿ ಹಾಗಲ್ಲ. ಲಂಡನ್ನಿನಿಂದ ಮಂಡಲಾಪುರದ ತನಕ ಪ್ರಯಾಣಮಾಡಿದ ಚೆಲುವರಾಯ ಮನೆ

ತಲಪಿ ಅರೆಗಳಿಗೆ ಯಾಗುವುದರೊಳಗೆ, ಮನದನ್ನೆ ಯೊಡನೆ ಗುಡ್ಡ ಕಾಡುಗಳಲ್ಲಿ ವಿಹರಿಸಲು ಹೊರಡುತ್ತಾನೆ.

ಒಟ್ಟಾರೆ ಹೇಳುತ್ತೇನೆ....ಸಿನಿಮಾ ಪ್ರಪಂಚದ ವ್ಯಕ್ತಿಗಳನ್ನು ಕಂಡು ನನಗೆ ಅಸೂಯೆಯಿಲ್ಲ. ಅವರಿಗೆ ಮಾಡುವುದಕ್ಕೆ, ಕೆಲಸವೇ ಇಲ್ಲದಿರುವುದು, ಅವರ ಭರ್ಜರಿ ಬಟ್ಟೆ ಬರೆಗಳು, ಅವರು ಕಬಳಿಸುವ ತಿಂಡಿ ತಿನಸುಗಳು, ಅವರ ಕುಡಿತ ಕುಣಿತಗಳು, ಪ್ರಣಯ ಲೀಲೆಗಳು ಇದಾವುದಕ್ಕೂ ನನಗೆ ಹೊಟ್ಟೆಯುರಿಯಿಲ್ಲ. ಆದರೆ ಅವರಿಗಿರುವ ಸಂಚಾರ ಸೌಕರ್ಯ ಮಾತ್ರ....ಛೆ ಏನಂತ ಹೇಳುವುದು!

ಪ್ರೀಸ್ಟ್ಲಿಯವರ ವಿಚಾರ ಸರಣಿಗೆ ತಲೆದೂಗಿದೆ. (ಅವರ ಲೇಖನಿಯ ಮಸಿ ಆರದಿರಲಿ!) ಅಷ್ಟು ಹೊತ್ತಿಗೆ ಪಕ್ಕದಲ್ಲಿದ್ದ ನನ್ನಾಕೆ ಗೊಣಗಿದಳು...."ಥ್ರೂ ಗಾಡಿ ಹತ್ತಿದ್ದರೆ ಎಷ್ಟೋ ಚೆನ್ನಾಗಿತ್ತು. ಇನ್ನಿದೆ ಅರಸೀಕೆರೇಲಿ ಆ ಛೇಂಜ್ ಮಾಡೋ ಗೋಳು"

ಆಕೆ ಹೇಳಿದ್ದು ನಿಜ. ಗೋಳೇ ಅದು. ಈ ಜಡ ಪ್ರಪಂಚದಲ್ಲಿ ಪ್ರಯಾಣವೆಂದರೆ ಹಾಗೆಯೇ. ಅದೀಗ ಒಂದು ರೀತಿಯಿಂದ ನೋಡಿದರೆ ಇಲ್ಲಿನ ಜೀವನವೇ ಹಾಗೆ ಅನ್ನಿಸೋದಿಲ್ಲವೆ?

— ರಾಮಕೃಷ

— () —



"ಈಕೆ ಯಾರೂ ಅಲ್ಲ, ನನ್ನ ಹೆಡ್ತಿ, ಪಟ್ಣಕ್ಕೆ ಬಂದು ಷೋಕಿ ಕಲಿತು ಬಿಟ್ಟೋಳ್,
ಈಗ ಅಮ್ಮಾವ್ರ ಮನೆಗೆ ಕೆಲಸಕ್ಕೆ ಹೋಗ್ತಾವಳೆ"

ಕೆನ್ನೆಗೆ ಏಟು

" ಉಷ್ಣಂ ಉಷ್ಣೇನ ಶಾಮ್ಯತಿ" "ಕೊಂದ ಪಾಪ ತಿಂದರೆ ಹೋಗುತ್ತೆ" "ವಜ್ರಂವಜ್ರೇಣ ಭಿಧ್ಯತೆ" ಎಂಬ ಆಪ್ತವಾಕ್ಯಗಳನ್ನು ಎಲ್ಲರೂ ಬಲ್ಲರು. ಅದೇ ರೀತಿ, ಏಟು ಏಟೀನ ಶಾಮ್ಯತೆ. ಒಂದು ಕೆನ್ನೆಗೆ ನಾವು ಏಟು ಬಿಟ್ಟರೆ, ನಮ್ಮ ಕೋಪ ಶಮನವಾಗುತ್ತದೆಯೋ? ಇಲ್ಲ; ಇನ್ನೊಂದನ್ನಾದರೂ, ಬಿಡಲೇಬೇಕು. ಅದೇ ಕೆನ್ನೆಗೆ ಆ ಏಟು ತಡೆಯುವುದಕ್ಕೆ ಶಕ್ತಿ ಕಡಮೆ. ಆದರಿಂದಲೇ, ಮತ್ತೊಂದು ಕೆನ್ನೆಯನ್ನೂ ದೇವರು ಆತನಿಗೆ ದಯೆ ಪಾಲಿಸುವುದು. ಅಲ್ಲದೆ, ನಮ್ಮ ಕೋಪ ಶಮನವಾಗುವುದು ಹಾಗಿರಲಿ, ಆತನ ನೋವು ಶಮನವಾಗುವುದಕ್ಕೂ, ಏಟು ಎರಡು ಕಡೆಗಳಿಗೂ ಸಮನಾಗಿ ಬೀಳಬೇಕು. ಒಂದು ಏಟನಿಂದಾದ ಸೊಟ್ಟು, ಇನ್ನೊಂದೇಟಿಂದ ನೆಟ್ಟಗಾಗುತ್ತದೆ. ಬಲ ಎಡ ಎರಡು ಭಾಗಗಲ್ಲೂ, ಮೂತಿ ಒಂದೇ ಅಳತೆಗೆ ಉಬ್ಬಿಹದು, ಅಂದವಾಗುತ್ತದೆ: ಅದರ ಚಂದ ಗೆಡುವುದಿಲ್ಲ; ಅದೂ ಅಲ್ಲದೆ, ಯಾವುದನ್ನು ಕೊಟ್ಟರೂ, **ಏಕೆ** ಕೊಡುವುದು, ಕೊಡುವವನಿಗೂ ಅಶುಭ, ಇಸುಕೊಳ್ಳುವವನಿಗೂ ಅಶುಭ. ಈ ಅಶುಭದಿಂದ, ದಾನಿಯನ್ನು ಕಾಪಾಡುವ ಭಾರ, ದಾನ ಸ್ವೀಕಾರಕ್ಕಾಗಿ, ಕೆನ್ನೆ ನೀಡುವ ವ್ಯಕ್ತಿಯದು. ಆದಕ್ಕೋಸ್ಕರವೇ ಇರಬೇಕು, ನಮ್ಮ ಒಂದು ಕೆನ್ನೆಗೆ ಒಬ್ಬ ಒಂದೇಟು ಕೊಟ್ಟು ಓಡಿಹೋಗಲು ಹವಣಿಸಿದರೆ, ಅವನನ್ನು ಹಿಡಿದು ನಿಲ್ಲಿಸಿ ಅವನೆದುರು ನಮಗೆ ದೇವರು ದಯೆಪಾಲಿಸಿರುವ ಮತ್ತೊಂದು ಕೆನ್ನೆಯನ್ನು ತೋರಿಸಿ, " ಸ್ವಾಮಿ! ಒಂದೇ ಕೊಡುವುದು **ನಿಮಗೆ** ಅಮಂಗಳಕಾರಕ, **ನನಗೆ** ಅವಲಕ್ಷಣಕಾರಕ" ಎಂದು ಬೇಡಿಕೊಳ್ಳಬೇಕಾದ ಕರ್ತವ್ಯ ನಮ್ಮದು, ಅದೇ ಧರ್ಮ, ಎಂದು ಮಹಾತ್ಮರು ಸಾರುತ್ತಿರುವುದು.

ಕೊರವಾವಲೋಕನ

'ನಿಮ್ಮ' ಚಪ್ಪಲಿಯಲ್ಲಿ ಹಿಮ್ಮಡಿಹತ್ತಿರ ಮೊಳೆ ಎದ್ದಿದೆ ಅನ್ನಿ. ಆಗ ಅವಳು ಅವಸರವಾಗಿ ನಮ್ಮ ಹತ್ತಿರ ಬರಬೇಕು ಅನ್ನಿ ಚಪ್ಪಲಿ ಮೆಟ್ಟಿಕೊಂಡು—ಅವಳು ಆಗ ಹೇಗೆ ವಾಲಾಡುತ್ತ ನಡೆಯಬಹುದು ಹಾಗೆ ನಡೆಯುತ್ತಾ ಬಂದ ಕೊರವ ಆ ಸಾಯಂಕಾಲ ಕ್ಲಬ್ಬಿಗೆ.

ಅವನ ನಡಿಗೆ ನೋಡಿ ನಾನು ಬಲ ಹುಬ್ಬು ಎತ್ತಿದೆ.

ಕುರ್ಚಿ ಮೇಲೆ ಕೂತು, ಬಲಗಾಲನ್ನು ಇನ್ನೊಂದು ಕುರ್ಚಿ ಎಳೆದುಕೊಂಡು ಅದರ ಮೇಲಿಟ್ಟು, ಅದನ್ನು ಹಿತವಾಗಿ ಮಾಲೀಷ್‌ಮಾಡುತ್ತಾ, ಅವನಂದ.

"ನೋಡೋ, ಅಂಗಾಲು ಹಿಮ್ಮಡಿ ಬಿರುಕು ಬಿಟ್ಟಿದೆ. ನಡೆದರೆ ಚಾಪೆ ಮುಳ್ಳಿನ ಮೇಲೆ ನಡೆದ ಹಾಗಿರುತ್ತೆ ಅದಕ್ಕೇ ಬೇಲೂರಿನ ಶಿಲಾ ಬಾಲಿಕೆಯರ ನಡಿಗೆಯನ್ನು ಅನುಕರಣಮಾಡಬೇಕಾಗಿದೆ"

"ಇದಕ್ಕೆ ಏನೋ ಕಷ್ಟ. ಡಾಕ್ಟರನ್ನು ನೋಡೊ" ಅಂದೆ.

'ಅಯ್ಯೊ! ಮುಂಚೆ ಅದನ್ನು ಆಗಲೇ ಮಾಡಿದೆ. ಕಣ್ಣುನೋವು ಅಂದವನಿಗೆ ಕಪ್ಪು ಕನ್ನಡಕ ಹಾಕ್ಕೋ ಕಣ್ಣಿಗೆ ವಿಶ್ರಾಂತಿ ಕೊಡು ಎಂದ. ಹೊಟ್ಟೆನೋವು ಎಂದವನಿಗೆ ಹೊಟ್ಟೆಗೆ ವಿಶ್ರಾಂತಿಕೊಡು ಎಂದ. ಕಾಲುನೋವು ಅಂದವನಿಗೂ ಕೂತುಕೋ ಎಂದ. ತಲೆನೋವು ಎಂದ ರಾಜಕಾರಣಿಗೆ ತಲೇಗೆ ವಿಶ್ರಾಂತಿ ಕೊಡು ಎಂದ. ತೋಳುನೊವು ಎಂದವಳಿಗೆ, ಬೀಸುಕಲ್ಲಿಗೆ ವಿಶ್ರಾಂತಿ ಕೊಡು ಎಂದ. ಕಿವಿ ನೋವು ಎಂದ ಮಾಸ್ತರಿಗೆ ರೇಡಿಯೋಗೆ ವಿಶ್ರಾಂತಿ ಕೊಡು ಎಂದ. ಹಲ್ಲು ನೋವು ಎಂದ ಮಹರಾಯ್ತಿಗೆ ಗಂಡನಿಗೆ ವಿಶ್ರಾಂತಿ ಕೊಡು ಎಂದ. ಇಷ್ಟೆಲ್ಲಾ ಆದಮೇಲೆ ನಾನು ಹೋಗಿ ಹಿಮ್ಮಡಿ ಬಿರುಕುಬಿಟ್ಟಿದೆ, ನೋವು, ಎಂದರೆ ಹಿಮ್ಮಡಿಗೆ ವಿಶ್ರಾಂತಿ ಕೊಡು ಕೈಮೇಲೆ ನಡಿ ಅಂತ ಹೇಳದೇ ಬಿಟ್ಟಾನೆ? ಆದಕ್ಕೇ ಆಸ್ಪತ್ರೆಗೆ ಹೋಗಿ ಅರ್ಧ ಗಂಟೆ ಕಾದು ಇದನ್ನೆಲ್ಲಾ ಕೇಳಿ ನನ್ನ ಸರ್ತಿ ಬರುವ ಮೊದಲೇ ಈ ನೃತ್ಯನಡೆ ಹಾಕುತ್ತಾ ಇಲ್ಲಿಗೆ ಬಂದುಬಿಟ್ಟೆ. —ಕಾಲು ಮೇಲೆ ನಡೆದುಕೊಂಡು ಎಂದಾ ಕೊರವ.



ನಿಮಗಾಗಿಯೇ ಮೀಸಲಾಗಿದೆ
ಡ್ರಾಲಿ
ಮಸ್ಕ್ ಸೋಪ್
ಟಾಲ್ಕ್ ಪೌಡರ್
A. V. R. A. & CO.
MADRAS-1 & BOMBAY-2



ಬೆಳ್ಳಗೆ
ಒಗೆಯಲ್ಪಟ್ಟಿವೆ
ಪ್ರಕಾಶಮಾನವಾಗಿ
ಒಗೆಯಲ್ಪಟ್ಟಿವೆ
ಇದಕ್ಕೆ
ಸನ್‌ಲೈಟ್
ಸೋಪೇ ಕಾರಣ
SUNLIGHT


FACE — the index of Your Charm
RAJA SNOW
Protects the Face enhances its Charm
MANYAM & CO.
BANGALORE , MADRAS , MATHURAI , BOMBAY.

“ನನ್ನ ಚರ್ಮಸೌಂದರ್ಯಕ್ಕೆ

ಲಕ್ಸ್ ಟಾಯಿಲೆಟ್ ಸೋಪಿನ


ಮೇಲೆ ನಂಬಿಕೆಯಿಡುತ್ತೇನೆ” ಎಂದು ಮಾಧುರಿದೇವಿ ಹೇಳುತ್ತಾಳೆ



ಬೆಳ್ಳಗಿರುವ ಶುದ್ಧವಾದ ಮತ್ತು
ಸುಂದರವಾದ ಸುವಾಸನೆಯುಳ್ಳ ಈ ಸೋಪು ನಿಮ್ಮ
ಚರ್ಮವನ್ನು ಕೂಡಾ ಸುಂದರವಾಗಿಡಲಿ!

ಸಿನೆಮಾ ತಾರೆಯರ ಸೌಂದರ್ಯದ ಸೋಪು

LTS. 336-50 KN


ಪ್ರತಿ ಕೆಲಸಕ್ಕೂ ಪ್ರತ್ಯೇಕವಾದ
ಷಾಲಿಮಾರ್ ಪೆಯಿಂಟ್
ಇದೆ.
ಜಾಣರು ಷಾಲಿಮಾರ್ ಪೆಯಿಂಟನ್ನೇ
ಉಪಯೋಗಿಸುತ್ತಾರೆ
SPX 83A-KN
SHALIMAR
PAINT
SHALIMAR PAINT, COLOUR & VARNISH CO., LTD.
POST BOX 136, MADRAS 1